REGISTERED WITH RNI NEW DELHI REG. N0.69683/97-Postal Registration No.RNP/KA/BGS/2259/2024-2026
Office of Posting: Bangalore PSO, Bangalore - 560026.; Date of Posting & Publishing Every Wednesday; Price Rs. 2 (Pages-8)

# ಪಟ್ಟಣ ಸಹಕಾರ ಬ್ಯಾಂಕುಗಳ ವಾರ್ತಾ ಪತ್ರಿಕೆ

ಕರ್ನಾಟಕ ರಾಜ್ಯ ಸಹಕಾರ ಪಟ್ಟಣ ಬ್ಯಾಂಕುಗಳ ಮಹಾಮಂಡಳದ ಅಧಿಕೃತ ಕನ್ನಡ ವಾರಪತ್ರಿಕೆ

ಸಂಪುಟ : 33 । ಸಂಚಿಕೆ : 07 । 20 ಮೇ 2026 । ಬುಧವಾರ । ಪುಟಗಳು : 8 । ಬೆಲೆ : 2/-

## ಮಹಾಮಂಡಳದ ಸನ್ಮಾನ್ಯ ಅಧ್ಯಕ್ಷರಾದ ಶ್ರೀ ಎಚ್.ಕೆ. ಪಾಟೀಲರವರು ಪಟ್ಟಣ ಸಹಕಾರ ಬ್ಯಾಂಕುಗಳಿಗೆ ಹೊಸ ತಂತ್ರಾಂಶಗಳನ್ನುಅಳವಡಿಸುವ ಕುರಿತು ವಿಸಾಫ್ಟ್ ಟೆಕ್ನಾಲಜಿ ಪ್ರೈವೇಟ್ ಲಿ.,ನ ಅಧಿಕಾರಿಗಳೊಂದಿಗೆ ಸಭೆ ನಡೆಸಿದರು



**ಬೆಂಗಳೂರು** : ದಿನಾಂಕ : 08.05.2026ರಂದು ಮಹಾಮಂಡಳದ ಸನ್ಮಾನ್ಯ ಅಧ್ಯಕ್ಷರಾದ ಶ್ರೀ ಎಚ್.ಕೆ. ಪಾಟೀಲರವರ ಅಧ್ಯಕ್ಷತೆಯಲ್ಲಿ ಪಟ್ಟಣ ಸಹಕಾರ ಬ್ಯಾಂಕುಗಳಲ್ಲಿ ಹೊಸ ಬ್ಯಾಂಕಿಂಗ್ ವ್ಯವಸ್ಥೆ ಅಳವಡಿಸುವ ಕುರಿತು ವಿಸಾಫ್ಟ್ ಟೆಕ್ನಾಲಜಿ ಪ್ರೈವೇಟ್ ಲಿ.,ನ ಅಧಿಕಾರಿಗಳೊಂದಿಗೆ ಸಭೆ ಜರುಗಿತು. ಈ ಸಭೆಯಲ್ಲಿ ಮಹಾಮಂಡಳದ ಅಧ್ಯಕ್ಷರಾದ ಶ್ರೀ ಎಚ್.ಕೆ. ಪಾಟೀಲರವರು ಮಾತನಾಡಿ ಬ್ಯಾಂಕಿಂಗ್ ಕ್ಷೇತ್ರದಲ್ಲಿ ಇಂದು ಅನೇಕ ಪೈಪೋಟಿಗಳು ಎದುರಾಗುತ್ತಿವೆ. ಪಟ್ಟಣ ಸಹಕಾರ ಬ್ಯಾಂಕುಗಳು ಇಂದು ವಾಣಿಜ್ಯ, ರಾಷ್ಟ್ರೀಕೃತ, ಖಾಸಗಿ ಬ್ಯಾಂಕುಗಳು, ಫೇಮೆಂಟ್ ಬ್ಯಾಂಕುಗಳು ಮತ್ತು ಅಂಚೆ ಬ್ಯಾಂಕಿಂಗ್ ವ್ಯವಸ್ಥೆ ನಡುವೆ ತೀವ್ರವಾದ ಪೈಪೋಟಿಯನ್ನೊಡ್ಡಿವೆ. ಪಟ್ಟಣ ಸಹಕಾರ ಬ್ಯಾಂಕುಗಳಿಗೆ ಹೊಸದಾಗಿ ಬ್ಯಾಂಕಿಂಗ್ ತಂತ್ರಾಂಶಗಳನ್ನು ಅಳವಡಿಸಿಕೊಳ್ಳುವುದು ಅವಶ್ಯಕವಾಗಿರುತ್ತದೆ. ಪ್ರಯುಕ್ತ ವಿಸಾಫ್ಟ್ ಟೆಕ್ನಾಲಜಿ ಪ್ರೈವೇಟ್ ಲಿ.,ನ ಮುಖ್ಯಕಾರ್ಯನಿರ್ವಹಣಾಧಿಕಾರಿ ಮೂರ್ತಿ ವೀರಘಂಟ ರವರು ಹೊಸ ಬ್ಯಾಂಕಿಂಗ್ ವ್ಯವಸ್ಥೆ ಬಗ್ಗೆ ವಿವರಿಸಲಿದ್ದಾರೆ ಎಂದರು.

ಈ ಸಭೆಯಲ್ಲಿ ಇಂದಿನ ಬ್ಯಾಂಕಿಂಗ್ ವ್ಯವಸ್ಥೆ ಬಗ್ಗೆ ಮೂರ್ತಿ ವೀರಘಂಟರವರು ವಿವರವಾದ ಮಾಹಿತಿಯನ್ನು ನೀಡಿದರು. ಈ ಸಭೆಯಲ್ಲಿ ಮಹಾಮಂಡಳದ ಮಾಜಿ ಹಿರಿಯ ನಿರ್ದೇಶಕರಾದ ಶ್ರೀ ರುದ್ರೇಗೌಡ, ಮಹಾಮಂಡಳದ ನಿರ್ದೇಶಕರುಗಳಾದ ಶ್ರೀ ಎಂ.ಆರ್. ವೆಂಕಟೇಶ್, ಶ್ರೀ ಎನ್.ಎಂ. ಸುರೇಶ್, ವಿಶೇಷ ಆಹ್ವಾನಿತರಾದ ಶ್ರೀ ರಘುನಾಥ ಸಿ., ಶಿಕ್ಷಣ ನಿಧಿ ಸಲಹಾ ಸಮಿತಿ ಸದಸ್ಯರುಗಳಾದ ಶ್ರೀ ಚಂದ್ರಮೌಳಿ ಎಸ್., ಶ್ರೀ ಅಂಬೋರೆ ಪಿ. ಸತೀಶ್, ತುಮಕೂರು ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕಿನ ಪ್ರಧಾನ ವ್ಯವಸ್ಥಾಪಕರಾದ ಶ್ರೀ ಶ್ರೀಧರ, ಸಹಾಯಕ ಪ್ರಧಾನ ವ್ಯವಸ್ಥಾಪಕರಾದ ಶ್ರೀ ರಘುಪ್ರಸಾದ್, ವಿಸಾಪ್ಟ್ ಟೆಕ್ನಾಲಜಿ ಪ್ರೈವೇಟ್ ಲಿ.,ನ ಹಿರಿಯ ಉಪಾಧ್ಯಕ್ಷರಾದ ಶ್ರೀ ಶೇಷಗಿರಿ ಭಟ್, ಉಪಾಧ್ಯಕ್ಷರಾದ ಶ್ರೀ ವಿವೇಕ ಖನ್ನಾ, ಅಸೋಸಿಯೇಟ್ ಉಪಾಧ್ಯಕ್ಷರಾದ ಶ್ರೀ ಸಿರೀಶ್ ಎಸ್. ಹಂಪಿಹೊಳಿ, ಮಹಾಮಂಡಳದ ಉಪಮುಖ್ಯಕಾರ್ಯನಿರ್ವಹಣಾಧಿಕಾರಿ ಶ್ರೀ ಅನಿಲ ಎಚ್. ಕಿರೇಸೂರ ಹಾಗೂ ಅಧಿಕಾರಿಗಳು ಉಪಸ್ಥಿತರಿದ್ದರು.




## ಸಹಕಾರ ಸಂಘಗಳ ನಿಬಂಧಕರಾಗಿ ಶ್ರೀ ಪಿ.ಎಸ್. ಕಾಂತರಾಜು ಅಧಿಕಾರ ಸ್ವೀಕಾರ

**ಬೆಂಗಳೂರು** : ಸಹಕಾರ ಸಂಘಗಳ ನಿಬಂಧಕರಾಗಿ ಹಿರಿಯ ಐಎಎಸ್ ಅಧಿಕಾರಿ ಶ್ರೀ ಪಿ.ಎಸ್. ಕಾಂತರಾಜುರವರು ಅಧಿಕಾರ ನೂತನವಾಗಿ ವಹಿಸಿಕೊಂಡಿರುತ್ತಾರೆ. ಈ ಹಿನ್ನೆಲೆಯಲ್ಲಿ ಮಹಾಮಂಡಳದ ಮುಖ್ಯಕಾರ್ಯನಿರ್ವಹಣಾಧಿಕಾರಿ ಶ್ರೀ ಪುಂಡಲೀಕ ಎನ್. ಕೇರೂರೆಯವರು ಹೂಗುಚ್ಛ ನೀಡಿ ಸ್ವಾಗತಿಸಿದರು. ಈ ಸಂದರ್ಭದಲ್ಲಿ ಮಹಾಮಂಡಳದ ಉಪಮುಖ್ಯಕಾರ್ಯನಿರ್ವಹಣಾಧಿಕಾರಿ ಶ್ರೀ ಅನಿಲ ಎಚ್.ಕಿರೇಸೂರ ರವರು ಉಪಸ್ಥಿತರಿದ್ದರು.

ವಿಶ್ವಕರ್ಮ ಸಹಕಾರ ಬ್ಯಾಂಕ್ ಸಂಸ್ಥಾಪನಾ ದಿನಾಚರಣೆ 2
ಎಂಸಿಸಿ ಬ್ಯಾಂಕಿನಲ್ಲಿ 114ನೇ ಸಂಸ್ಥಾಪಕರ ದಿನಾಚರಣೆ 4
ನಿಮ್ಮ ಪ್ರಶ್ನೆ ನಮ್ಮ ಉತ್ತರ 7

## ಸಂಪಾದಕೀಯ

### ಆತ್ಮೀಯ ಸಹಕಾರಿಗಳೇ...



## ರೈತನ ಮೊಗದಲ್ಲಿ ಉತ್ಸಾಹವನ್ನು ಮೂಡಿಸಿ, ದೇಶದ ಆರ್ಥಿಕತೆಯನ್ನು ಚಿಗುರಿಸುವ ಮುಂಗಾರು

ರಾಜ್ಯದಲ್ಲಿ ಈ ಬಾರಿಯ ಸೂರ್ಯನ ಬಿರು ಬಿಸಿಲಿನ ತಾಪಕ್ಕೆ ಜನ, ಜಾನುವಾರುಗಳು ಬಸವಳಿದಿದ್ದು ನೆಲ ಬಿರಿದು ಹೊಲ, ಗದ್ದೆಗಳು ಒಂದು ಮಳೆಗಾಗಿ ಕಾತರಿಸಿವೆ. ದೇಶದಲ್ಲಿ ಜೂನ್‌ನಿಂದ ಸೆಪ್ಟೆಂಬರ್ ತಿಂಗಳವರೆಗೆ ಸುರಿಯುವ ನೈರುತ್ಯ ಮುಂಗಾರು ಮಳೆ ನಮ್ಮಲ್ಲಿನ ಕೃಷಿ ಚಟುವಟಿಕೆಗಳಿಗೆ ಅತಿ ಮುಖ್ಯವಾಗಿದೆ. ದೇಶದ ಆರ್ಥಿಕತೆಯೂ ಆಯಾ ವರ್ಷದ ಮುಂಗಾರು ಮಳೆಯನ್ನೇ ಆಧರಿಸಿದೆ. ಭತ್ತ, ಗೋಧಿ ಸೇರಿದಂತೆ ವಿವಿಧ ಬೆಳೆಗಳನ್ನು ಮುಂಗಾರು ಅವಧಿಯಲ್ಲಿಯೇ ಹೆಚ್ಚು ಬೆಳೆಯಲಾಗುತ್ತದೆ. ಮೊದಲು ದುರ್ಬಲವಾಗಿದ್ದ ಮುಂಗಾರು ಪೂರ್ವ ಮಳೆ ಈಗ ರಾಜ್ಯದ ಎಲ್ಲೆಡೆ ಚೆನ್ನಾಗಿ ಬರುತ್ತಿದೆ. ಮುಂದಿನ ಮುಂಗಾರು ಮಳೆಯ ನಿರೀಕ್ಷೆಯೊಂದಿಗೆ ಕೃಷಿ ಚಟುವಟಿಕೆಗಳಿಗೂ ಚಾಲನೆ ದೊರೆಕಿದೆ.

ಹವಾಮಾನ ಇಲಾಖೆಯ ಮುನ್ಸೂಚನೆಯಂತೆ ಮುಂಗಾರು ಮಾರುತಗಳು ನಿಗದಿತ ಸಮಯಕ್ಕಿಂತ ಐದು ದಿನ ಮುಂಚಿತವಾಗಿ, ಅಂದರೆ ಮೇ 26 ರಂದೇ ಕೇರಳ ಕರಾವಳಿಯನ್ನು ಪ್ರವೇಶಿಸಲಿರುವುದರಿಂದ, ಜೂನ್ ತಿಂಗಳ ಮೊದಲ ವಾರ ರಾಜ್ಯವನ್ನು ಪ್ರವೇಶಿಸುವ ನಿರೀಕ್ಷೆಯಿದೆ.

ಮಳೆ ಬಿದ್ದಕೂಡಲೆ ಪ್ರಕೃತಿಯಲ್ಲಿ ಆಗುವ ಬದಲಾವಣೆ ಅಭೂತಪೂರ್ವವಾಗಿರುತ್ತದೆ. ಎಂದೂ ನೆಲದಲ್ಲಿ ಬಿದ್ದ ಬೀಜಗಳು ಮೊಳೆತು ಚಿಗುರೊಡೆಯುತ್ತವೆ. ಒಣಗಿ ಬಾಡಿ ಬಸವಳಿದ ಮರ, ಗಿಡ, ಬಳ್ಳಿಗಳು ತಲೆಯೆತ್ತಿ, ಹಚ್ಚ ಹಸಿರಿನಿಂದ ಕಂಗೊಳಿಸುತ್ತವೆ. ಚಿಗುರಿದ ಗಿಡ, ಬಳ್ಳಿಗಳಲ್ಲಿ ಹೂ ಅರಳಿ, ಕಾಯಾಗಿ ಹಣ್ಣುಗಳು ಪ್ರಾಣಿ, ಪಕ್ಷಿಗಳ, ಜನರ ಬಾಯಿ ತಣಿಸುತ್ತವೆ. ಎಲ್ಲೆಡೆ ಚಿಟ್ಟೆ, ದುಂಬಿಗಳ ಹಾರಾಟ ಪ್ರಕೃತಿ ನವ ಚೈತನ್ಯದಿಂದ ಕಂಗೊಳಿಸುವುದು ತೋರುತ್ತದೆ.

ನೈರುತ್ಯ ಮುಂಗಾರು ಮಳೆ ಉತ್ತಮವಾಗಿ ಸುರಿದು ಬಯಲ ಹಸಿರನ್ನು ಮಾತ್ರ ಚಿಗುರಿಸುವುದಿಲ್ಲ, ದೇಶದ ಆರ್ಥಿಕತೆಯನ್ನೇ ಚಿಗುರಿಸುತ್ತದೆ ಎನ್ನುವುದು ಆರ್ಥಿಕ ತಜ್ಞರ ಅಭಿಪ್ರಾಯವಾಗಿದೆ. ಮುಂಗಾರು ಮಳೆ ರೈತನ ಮೊಗದಲ್ಲಿ ಉತ್ಸಾಹವನ್ನು ಮೂಡಿಸುತ್ತದೆ ಮಾತ್ರವಲ್ಲ, ನಾಡಿನ ಜನರಲ್ಲಿ ನೆಮ್ಮದಿಯನ್ನೂ ಮೂಡಿಸುತ್ತದೆ. ಉತ್ತಮ ನೈರುತ್ಯ ಮುಂಗಾರು ಎಲ್ಲ ಬಗೆಯ ಚಟುವಟಿಕೆಗಳು ಚುರುಕುಗೊಳ್ಳಲು ಪೂರಕ ವಾತಾವರಣಕ್ಕೆ ಕಾರಣವಾಗುತ್ತದೆ.

ಮುಂಗಾರು ಮಳೆ ನಮ್ಮ ಕವಿಗಳಿಗೂ ಸ್ಫೂರ್ತಿಯನ್ನು ಉಕ್ಕಿಸುತ್ತದೆ;

ಮುಂಗಾರಿನ ಅಭಿಷೇಕಕೆ/ ಮಿದುವಾಯಿತು ನೆಲವು/ ಧಗೆ ಆರಿದ ಹೃದಯದಲ್ಲಿ/ ಪುಟಿದೆದ್ದಿತು ಚೆಲುವು ಎಂದು ಆರಂಭವಾಗುವ ಜಿ.ಎಸ್. ಶಿವರುದ್ರಪ್ಪನವರ ಕವನ ಭರವಸೆಗಳ ಹೊಲಗಳಲ್ಲಿ/ ನೇಗಿಲ ಗೆರೆ ಕವನ/ ಶ್ರಾವಣದಲಿ ತೆನೆದೂಗುವ/ ಜೀವೋತ್ಸವ ಗಾನ ಎಂದು ಕೊನೆಗೊಳ್ಳುತ್ತದೆ. ನಿಜವೆ, ಮುಂಗಾರು ಮಳೆಯಿಂದಾಗಿ ಪ್ರಕೃತಿ ಜೀವೋತ್ಸವ ಗಾನ ಹಾಡುತ್ತದೆ.

ರೈತರು ಹೊಲ, ಗದ್ದೆ, ತೋಟಗಳಲ್ಲಿ ಕೃಷಿ ಚಟುವಟಿಕೆಗಳಲ್ಲಿ ನಿರತರಾಗಿರುವ ವರದಿಗಳು ಬರುತ್ತಿರುವುದರಿಂದ, ಕೇಂದ್ರ-ರಾಜ್ಯ ಸರ್ಕಾರಗಳು ಕೂಡಲೆ ತಡ ಮಾಡದೆ ರೈತರಿಗೆ ಅಗತ್ಯವಾದ ಬಿತ್ತನೆ ಬೀಜ, ರಸಗೊಬ್ಬರ, ಅಗತ್ಯ ಕೃಷಿ ಪರಿಕರಗಳನ್ನು ಸಕಾಲದಲ್ಲಿ ದೊರೆಯುವಂತೆ ಆಡಳಿತ ಯಂತ್ರವನ್ನು ಸಜ್ಜುಗೊಳಿಸಬೇಕಿದೆ. ಕೃಷಿಕರಿಗೆ ಅಗತ್ಯ ಆರ್ಥಿಕ ನೆರವನ್ನೂ ನೀಡಲು ಮುಂದಾಗಬೇಕಿದೆ. ಬರಲಿರುವ ಮುಂಗಾರು ನಮ್ಮ ರೈತರಿಗೆ, ಸಹಕಾರಿಗಳಿಗೆ, ಸಮಸ್ತ ಜನತೆಗೆ ಜೀವ ಚೈತನ್ಯ ತರಲಿ ಎಂದು ಹಾರೈಸುತ್ತೇನೆ.

▸▸ ಎಚ್.ಕೆ. ಪಾಟೀಲ

## ವಿಶ್ವಕರ್ಮ ಸಹಕಾರ ಬ್ಯಾಂಕ್ ಸಂಸ್ಥಾಪನಾ ದಿನಾಚರಣೆ

**ಮಂಗಳೂರು:** ಯಾವುದೇ ಒಂದು ಸಂಸ್ಥೆಯ ಸ್ಥಾಪನೆಯ ಹಿನ್ನೆಲೆ ಮತ್ತು ಉದ್ದೇಶವನ್ನು ಅರಿತುಕೊಂಡು ಸಿಬ್ಬಂದಿಗಳು ಅದಕ್ಕೆ ಪೂರಕವಾಗಿ ಕಾರ್ಯನಿರ್ವಹಿಸಿದರೆ ಸಂಸ್ಥಾಪಕರ ಆಶಯವು ಪೂರ್ಣಗೊಳ್ಳುತ್ತದೆ ಎಂದು ವಿಶ್ವಕರ್ಮ ಕಲಾ ಪರಿಷತ್ತಿನ ಅಧ್ಯಕ್ಷರಾದ ಡಾ. ಎಸ್.ಪಿ. ಗುರುದಾಸ್ ಅಭಿಪ್ರಾಯಪಟ್ಟರು.

ವಿಶ್ವಕರ್ಮ ಸಹಕಾರ ಬ್ಯಾಂಕಿನ ಸಂಸ್ಥಾಪನಾ ದಿನಾಚರಣೆಯ ಕಾರ್ಯಕ್ರಮದಲ್ಲಿ ಅವರು ಬ್ಯಾಂಕಿನ ಸಿಬ್ಬಂದಿಗಳನ್ನು ಉದ್ದೇಶಿಸಿ ಮಾತನಾಡಿದರು.

ಬ್ಯಾಂಕ್ ನಡೆದು ಬಂದ ಹಾದಿ ಹಾಗೂ ಸಂಸ್ಥಾಪಕರಿಂದ ಹಿಡಿದು ಇಂದಿನವರೆಗಿನ ಆಡಳಿತ ನಿರ್ದೇಶಕರು ಮತ್ತು ಸಿಬ್ಬಂದಿಗಳು ಬ್ಯಾಂಕಿನ ಬೆಳವಣಿಗೆಗಾಗಿ ಸಲ್ಲಿಸಿದ ತ್ಯಾಗ ಮತ್ತು ಅವಿರತ ಶ್ರಮವನ್ನು ಅವರು ಸ್ಮರಿಸಿದರು. ಸಿಬ್ಬಂದಿಗಳ ಮಾನವೀಯ ಸ್ಪರ್ಶದಿಂದ ಸಮರ್ಪಿತ ಸೇವೆಯಿಂದ ಗ್ರಾಹಕರ ವಿಶ್ವಾಸಾರ್ಹತೆ ಬೆಳೆಯುತ್ತದೆ.ಮಧ್ಯಮ ಮತ್ತು ಕೆಳವರ್ಗದ ಸದಸ್ಯರಿಂದ ಕೂಡಿದ ಸಂಸ್ಥೆಯಲ್ಲಿ ಸದಸ್ಯರಿಗೆ ಹಣಕಾಸು ವ್ಯವಸ್ಥೆಯ ಅರಿವು ಮತ್ತು ಜಾಗೃತಿಯನ್ನು ಸಿಬ್ಬಂದಿಗಳು ಮೂಡಿಸಬೇಕಾಗಿದೆ ಎಂದು ಅವರು ಹೇಳಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ವಿಶ್ವಕರ್ಮ ಸಹಕಾರ ಬ್ಯಾಂಕಿನ ಅಧ್ಯಕ್ಷರಾದ ಡಾ. ಎಸ್. ಆರ್. ಹರೀಶ್ ಆಚಾರ್ಯ ಅವರು, ಬ್ಯಾಂಕಿನ ಬೆಳವಣಿಗೆಯನ್ನು ಅದರ ಪರಂಪರೆಯನ್ನು ಅರಿತುಕೊಂಡು ಮುಂದುವರಿಸುವ ಗುರುತರ ಜವಾಬ್ದಾರಿ ಸಿಬ್ಬಂದಿಗಳ ಮೇಲೆ ಇದೆ. ಸಿಬ್ಬಂದಿಗಳು ಬ್ಯಾಂಕಿನ ಸದಸ್ಯರೊಂದಿಗೆ ನಿರಂತರ ಸಂಪರ್ಕವನ್ನು ಇಟ್ಟುಕೊಂಡು ಅವರಲ್ಲಿ ಜಾಗೃತಿ ಮತ್ತು ಅರಿವನ್ನು ಮೂಡಿಸುವ ಆಪ್ತ ಸಮಾಲೋಚಕರ ರೀತಿ ಕಾರ್ಯನಿರ್ವಹಿಸಬೇಕಾಗಿದೆ ಎಂದು ಹೇಳಿದರು.

ಬ್ಯಾಂಕಿನ ಉಪಾಧ್ಯಕ್ಷರಾದ ಪಿ.ಜಗದೀಶ್ ಆಚಾರ್ಯ, ನಿರ್ದೇಶಕರಾದ ಭಾಸ್ಕರ ಆಚಾರ್ಯ ಡಿ., ಸೀತಾರಾಮ ಆಚಾರ್ಯ ಬೆಳುವಾಯಿ, ಜಗದೀಶ್ ಆಚಾರ್ಯ ಕಪ್ಪೆಟ್ಟು, ಬಿ. ಗುರುಪ್ರಸಾದ್ ಶೆಟ್ಟಿ, ಹರಿಪ್ರಸಾದ್, ಶರತ್ ಕೆ.ಆಚಾರ್ಯ, ಭರತ್ ನಿಡ್ಪಳ್ಳಿ, ಜಯಶ್ರೀ ವಿ.ಆಚಾರ್ಯ, ಪಿ. ಪ್ರಶಾಂತ್ ಆಚಾರ್ , ಬಿಜು ಜಯ, ಬಿ. ಜಯಪ್ರಕಾಶ್ ಆಚಾರ್ಯ, ಶ್ರುತಿ ಆಚಾರ್ಯ ಕೆ., ವ್ಯವಸ್ಥಾಪಕ ನಿರ್ದೇಶಕರಾದ ವಸಂತ ಅಡ್ಯಂತಾಯ ಮುಂತಾದವರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

## 13th Batch (DUCBM) ಡಿಪ್ಲೋಮಾ ಇನ್ ಅರ್ಬನ್ ಕೋ-ಆಪರೇಟಿವ್ ಬ್ಯಾಂಕಿಂಗ್ ಮ್ಯಾನೇಜ್‌ಮೆಂಟ್ ಕೋರ್ಸ್‌ನ ಅರ್ಜಿ ಆಹ್ವಾನ ದಿನಾಂಕವನ್ನು ಮುಂದೂಡಿರುವ ಕುರಿತು

ಕರ್ನಾಟಕ ರಾಜ್ಯ ಸಹಕಾರ ಪಟ್ಟಣ ಬ್ಯಾಂಕುಗಳ ಮಹಾಮಂಡಳವು ರಾಜ್ಯದಲ್ಲಿರುವ ಪಟ್ಟಣ ಸಹಕಾರ ಬ್ಯಾಂಕುಗಳ ಸಿಬ್ಬಂದಿಗಳಿಗೆ Diploma in Urban Cooperative Banking Management ಕೋರ್ಸ್‌ನ್ನು ಪ್ರಾರಂಭಿಸಿರುತ್ತದೆ. 12ನೇ ಬ್ಯಾಚಿನ ಪರೀಕ್ಷೆಯ ಫಲಿತಾಂಶ ಸದ್ಯದಲ್ಲಿಯೆ ಬರಲಿದ್ದು. ಈಗ 13ನೇ ಬ್ಯಾಚ್‌ನ ಡಿಯುಸಿಬಿಎಂ ಕೋರ್ಸ್‌ನ್ನು ಪ್ರಾರಂಭಿಸಲು ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಸದರಿ ಕೋರ್ಸ್‌ನ್ನು ಮಹಾಮಂಡಳ, ಆರ್‌ಐಸಿಎಂ ಮತ್ತು ಎನ್‌ಸಿಸಿಟಿ ನವದೆಹಲಿ ಇವುಗಳ ಸಹಯೋಗದೊಂದಿಗೆ ನಡೆಸಲಾಗುವುದು. ಈ ಕೋರ್ಸ್‌ಗೆ ಸಂಬಂಧಿಸಿದಂತೆ ಮಹಾಮಂಡಳವು ಬೆಂಗಳೂರಿನಲ್ಲಿ ಸಂಪರ್ಕ ತರಗತಿಗಳನ್ನು ಮತ್ತು ಪರೀಕ್ಷಾ ಕೇಂದ್ರವನ್ನು ಆಯ್ಕೆ ಮಾಡಿಕೊಂಡಿರುತ್ತದೆ. ಸದರಿ ಕೋರ್ಸ್ ನೌಕರರ ಮುಂಬಡ್ತಿಗೆ ಅನ್ವಯವಾಗುತ್ತದೆ ಹಾಗೂ ಬ್ಯಾಂಕಿನ ಅಭಿವೃದ್ಧಿಗೆ ಸಹಕಾರವಾಗುತ್ತದೆ.

ಪ್ರತಿ ಅಭ್ಯರ್ಥಿಗೆ ಕೋರ್ಸ್‌ನ ಶುಲ್ಕ ರೂ.5,700+(GST) 1026. ಒಟ್ಟು 6,726/-ಗಳನ್ನು ನಿಗದಿಪಡಿಸಲಾಗಿದೆ. ಕೊನೆಯ ದಿನಾಂಕ : 16.05.2026ಕ್ಕೆ ನೀಡಲಾಗಿತ್ತು. ಈ ಸದರಿ ಕೋರ್ಸನ ಅವಧಿಯು ಮೂರು ತಿಂಗಳು ಆಗಿರುತ್ತದೆ.

ಕೆಲವು ಬ್ಯಾಂಕುಗಳ ಒತ್ತಾಯದ ಮೇರೆಗೆ ಅರ್ಜಿಯನ್ನು ಕಳುಹಿಸಲು ಕೊನೆಯ ದಿನಾಂಕ : 30.05.2026ರವರಗೆ ಮುಂದೂಡಲಾಗಿದೆ.

ಆದ್ದರಿಂದ ತಮ್ಮ ಬ್ಯಾಂಕಿನ ಸಿಬ್ಬಂದಿಗಳನ್ನು Diploma in Urban Cooperative Banking Management (DUCBM) ಕೋರ್ಸಿಗೆ ನಿಯೋಜಿಸಿ ಆದಷ್ಟು ಬೇಗನೆ ಅರ್ಜಿಯನ್ನು ಮಹಾಮಂಡಳಕ್ಕೆ ಕಳುಹಿಸಬೇಕಾಗಿ ಕೋರಲಾಗಿದೆ. ಹೆಚ್ಚಿನ ಮಾಹಿತಿಗಾಗಿ ಮಹಾಮಂಡಳದ ಉಪ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಶ್ರೀ ಅನಿಲ ಎಚ್. ಕಿರೇಸೂರ (7411332655) ಮತ್ತು ಮಹಾಮಂಡಳದ ಅಧಿಕಾರಿ ಶ್ರೀ ರಮೇಶ್ ಎನ್ (9448003167) ಇವರುಗಳನ್ನು ಸಂಪರ್ಕಿಸಬಹುದಾಗಿದೆ.

## ಬೆಳಗಾವಿಯ ದೈವಜ್ಞ ಸಹಕಾರ ಬ್ಯಾಂಕ್ ರೂ.2.05 ಕೋಟಿ ನಿವ್ವಳ ಲಾಭಗಳಿಕೆ



ಶ್ರೀ ರಾಜೇಶ ಆರ್. ಅಣವೇಕರ
ಅಧ್ಯಕ್ಷರು



ಶ್ರೀ ಮಂಜುನಾಥ ಎಸ್. ಶೇಟ
ಉಪಾಧ್ಯಕ್ಷರು

**ಬೆಳಗಾವಿ :** ದೈವಜ್ಞ ಸಹಕಾರ ಬ್ಯಾಂಕ್ 2025-26ರ ಆರ್ಥಿಕ ವರ್ಷಾಂತ್ಯಕ್ಕೆ ರೂ. 3.72 ಕೋಟಿಗೂ ಅಧಿಕ ಲಾಭ ಗಳಿಸಿದ್ದು, ಆದಾಯ ಕರ ಹಾಗೂ ಇತರೆ ನಿಧಿಗಳಿಗೆ ಅನವು ಮಾಡಿ ನಿವ್ವಳ ರೂ. 2.05 ಕೋಟಿ ನಿವಳ ಲಾಭಗಳಿಸಿದೆ ಎಂದು ಬ್ಯಾಂಕಿನ ಅಧ್ಯಕ್ಷರಾದ ಶ್ರೀ ರಾಜೇಶ. ಆರ್ ಅಣವೇಕರ ತಿಳಿಸಿದರು.

ಕಳೆದ 52 ವರ್ಷಗಳಿಂದ ಸಾಮಾನ್ಯ ಮತ್ತು ಮಧ್ಯಮ ವರ್ಗಗಳ ಜನರ ಅಭ್ಯುದಯಕ್ಕಾಗಿ ಸ್ಥಾಪಿಸಿದ ಬ್ಯಾಂಕ ಇದೀಗ ಹೆಮ್ಮರವಾಗಿ ಬೆಳೆದು ಸಾವಿರಾರು ಕುಟುಂಬಗಳಿಗೆ ಆರ್ಥಿಕ ನೆರವು ಕಲ್ಪಿಸಿದೆ ಎಂದರು.

ಈ ಬ್ಯಾಂಕಿನ ಅತ್ಯಧಿಕ ಸದಸ್ಯರು ಸಾಲ ಮರುಪಾವತಿ ಮಾಡುವ ಮೂಲಕ ಪ್ರಾಮಾಣಿಕತೆ ಮೆರೆದಿದ್ದಾರೆ. ನಾಡಿನ ಪ್ರತಿಷ್ಠಿತ ಕನ್ನಡಪ್ರಭ ಮತ್ತು ಏಷ್ಯಾನೆಟ್ ಸುವರ್ಣನ್ಯೂಸ್ ಸಂಸ್ಥೆ ವತಿಯಿಂದ ದಿನಾಂಕ : 07-02-2026ರಂದು ದಿ. ಕ್ಯಾಪಿಟಲ್ ಹೋಟೆಲ್, ರಾಜಭವನ ರಸ್ತೆ, ವಸಂತ ನಗರ, ಬೆಂಗಳೂರಿನಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಸಹಕಾರ ಕ್ಷೇತ್ರಕ್ಕೆ ನೀಡಿರುವ ಮಹತ್ತರ ಕೊಡುಗೆಯನ್ನು ಗುರುತಿಸಿ ಕನ್ನಡಪ್ರಭ ಮತ್ತು ಸುವರ್ಣನ್ಯೂಸ್ ಪ್ರಧಾನ ಸಂಪಾದಕರಾದ ಮಾನ್ಯ ಶ್ರೀ ರವಿ ಹೆಗಡೆ, ಕರ್ನಾಟಕ ಸರ್ಕಾರದ ಕೃಷಿ ಸಚಿವರಾದ ಮಾನ್ಯ ಶ್ರೀ ಚಲುವರಾಯಸ್ವಾಮಿ, ಹಾಗೂ ಸಕ್ಕರೆ ಸಚಿವರಾದ ಮಾನ್ಯ ಶ್ರೀ ಶಿವಾನಂದ ಪಾಟೀಲ್, ವಿರೋಧ ಪಕ್ಷದ ನಾಯಕರಾದ ಮಾನ್ಯ ಶ್ರೀ ಆರ್.ಅಶೋಕ್ ಮೊದಲಾದ ಗಣ್ಯರ ಉಪಸ್ಥಿತಿಯಲ್ಲಿ ನಮ್ಮ ಬ್ಯಾಂಕಿಗೆ ಕರ್ನಾಟಕ ಸಹಕಾರ ಶಿರೋಮಣಿ-2025 ಪ್ರಶಸ್ತಿ ನೀಡಿ ಗೌರವಿಸಿರುವುದು ಹೆಮ್ಮೆಯ ವಿಷಯವಾಗಿದೆ. ಅದೇ ರೀತಿ ಪ್ರಸ್ತುತ ವರ್ಷದಲ್ಲಿ ರೂ. 314.73 ಕೋಟಿ ದುಡಿಯುವ ಬಂಡವಾಳವಿದ್ದು, ರೂ. 274.95 ಕೋಟಿ ಠೇವಣಿ ಹಣ ಹೊಂದಿದೆ ಹಾಗೂ ರೂ. 193.63 ಕೋಟಿ ಸಾಲ ವಿತರಿಸಲಾಗಿದೆ.

ಬ್ಯಾಂಕಿನ ನಿವ್ವಳ ಅನುತ್ಪಾದಕ ಸಾಲದ (ಎನ್.ಪಿ.ಎ) ಪ್ರಮಾಣವು ಶೇ.0% ಇರುತ್ತದೆ. ಇದು ಬ್ಯಾಂಕಿನ ಪ್ರಗತಿಗೆ ಹೊಸ ಮೈಲುಗಲ್ಲುವೆನಿಸುತ್ತದೆ. ಬ್ಯಾಂಕಿನ ಎಲ್ಲಾ ಶಾಖೆಗಳಲ್ಲೂ ಲಾಕರ್, RTGS, NEFT, ATM ಕಾರ್ಡ್ ಸೌಲಭ್ಯ, ಅದರಂತೆ ಬ್ಯಾಂಕಿನ ಡಿಜಿಟಲ್ ಸೇವೆ IMPS, UPI, Mobile banking, ಹಾಗೂ ಮನೆ ಬಾಗಿಲಿಗೆ ಬ್ಯಾಂಕಿಂಗ್ (Door step Banking) ಆಧುನಿಕ ಸೇವೆಯನ್ನು ಗ್ರಾಹಕರಿಗೆ ಕಲ್ಪಿಸಲಾಗಿದೆ ಎಂದು ಬ್ಯಾಂಕಿನ ಅಧ್ಯಕ್ಷರು ಹಾಗೂ ಉಪಾಧ್ಯಕ್ಷರು ತಿಳಿಸಿದರು.

ಬ್ಯಾಂಕಿನ ಅಧ್ಯಕ್ಷರ ಹಾಗೂ ನಿರ್ದೇಶಕರ ನಿಸ್ವಾರ್ಥ ಮನೋಭಾವ ಆಡಳಿತ ಮಂಡಳಿ ಮತ್ತು ಸಿಬ್ಬಂದಿಯ ಪರಿಶ್ರಮದಿಂದ ಬ್ಯಾಂಕು ಹೆಚ್ಚಿನ ಪ್ರಗತಿ ಹಾಗೂ ಲಾಭಗಳಿಸಲು ಸಾಧ್ಯವಾಗಿದೆ.

ಸಕಾಲಕ್ಕೆ ಸಾಲವನ್ನು ಮರುಪಾವತಿ ಮಾಡಿರುವ ಗ್ರಾಹಕರ ಕಾಳಜಿ ಹಾಗೂ ವ್ಯವಹಾರಗಳಿಂದ ಬ್ಯಾಂಕು ಮತ್ತಷ್ಟು ಪ್ರಗತಿ ಪಥದಲ್ಲಿ ಮುನ್ನಡೆಯಲಿದೆ ಎಂದು ತಿಳಿಸಿದರು.

# ಎಂಸಿಸಿ ಬ್ಯಾಂಕಿನಲ್ಲಿ 114ನೇ ಸಂಸ್ಥಾಪಕರ ದಿನಾಚರಣೆ




**ಮಂಗಳೂರು :** ಎಂಸಿಸಿ ಬ್ಯಾಂಕ್ ಲಿಮಿಟೆಡ್ ತನ್ನ 114ನೇ ಸಂಸ್ಥಾಪಕರ ದಿನಾಚರಣೆಯನ್ನು ಆಡಳಿತ ಕಚೇರಿ ಆವರಣದಲ್ಲಿ ಭವ್ಯವಾಗಿ ಆಚರಿಸಿತು. ಕಾರ್ಯಕ್ರಮದಲ್ಲಿ ಬ್ಯಾಂಕಿನ ಸಂಸ್ಥಾಪಕರಾದ ದಿವಂಗತ ಶ್ರೀ ಪಿ.ಎಫ್. ಎಕ್ಸ್.ಸಾಲ್ಡಾನ್ಹ ಅವರ ದೂರದೃಷ್ಟಿಯ ಸೇವೆಯನ್ನು ಸ್ಮರಿಸಲಾಯಿತು ಹಾಗೂ ಸಹಕಾರಿ ಕ್ಷೇತ್ರದಲ್ಲಿ ಬ್ಯಾಂಕ್ ಸಾಧಿಸಿರುವ ನಿರಂತರ ಪ್ರಗತಿ ಹಾಗೂ ಸ್ಥೈರ್ಯವನ್ನು ಗೌರವಿಸಲಾಯಿತು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಅನಿಲ್ ಲೋಬೊ ವಹಿಸಿದ್ದರು. ಮಂಗಳೂರಿನ ಸೇಂಟ್ ಅಲೋಶಿಯಸ್ ಉಪಕುಲಪತಿ ರೆವ್. ಡಾ. ಪ್ರವೀಣ್ ಮಾರ್ಟಿಸ್ ಎಸ್.ಜೆ., ಕರ್ನಾಟಕ ಬ್ಯಾಂಕ್‌ನ ಮಾಜಿ ಮಹಾಪ್ರಬಂಧಕ ಹಾಗೂ ಮುಖ್ಯ ಅನುಸರಣಾಕಾರಿ ಡಾ. ಮೀರಾ ಅರನ್ಹಾ, ಮಂಗಳೂರು ಧರ್ಮಪ್ರಾಂತ್ಯದ ಸಾರ್ವಜನಿಕ ಸಂಪರ್ಕಾಧಿಕಾರಿ ಹಾಗೂ ರಚನಾ ಚೇಂಬರ್ ಆಫ್ ಕಾಮರ್ಸ್ ಅಂಡ್ ಇಂಡಸ್ಟ್ರಿಯ ಅಧ್ಯಕ್ಷ ಶ್ರೀ ರಾಯ್ ಕ್ಯಾಸ್ಟೆಲಿನೋ ಹಾಗೂ ಕೆನರಾ ಚೇಂಬರ್ ಆಫ್ ಕಾಮರ್ಸ್ ಅಂಡ್ ಇಂಡಸ್ಟ್ರಿಯ ಮಾಜಿ ಅಧ್ಯಕ್ಷ ಶ್ರೀ ಐಸಾಕ್ ವಾಸ್ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು. ಬ್ಯಾಂಕಿನ ಮಹಾಪ್ರಬಂಧಕರಾದ ಶ್ರೀ ಸುನಿಲ್ ಮಿನೇನೆಜಸ್ ವೇದಿಕೆಯಲ್ಲಿ ಉಪಸ್ಥಿತರಿದ್ದರು. ಕಾರ್ಯಕ್ರಮದಲ್ಲಿ ಗಣ್ಯರು ಹಾಗೂ ಸಂಸ್ಥಾಪಕರ ಕುಟುಂಬ ಸದಸ್ಯರು ದಿವಂಗತ ಶ್ರೀ ಪಿ.ಎಫ್.ಎಕ್ಸ್. ಸಾಲ್ಡಾನ್ಹ ಅವರ ಭಾವಚಿತ್ರಕ್ಕೆ ಪುಷ್ಪನಮನಸಲ್ಲಿಸಿ ಗೌರವಸಲ್ಲಿಸಿದರು.

ಸ್ವಾಗತ ಭಾಷಣದಲ್ಲಿ ಅಧ್ಯಕ್ಷರಾದ ಶ್ರೀ ಅನಿಲ್‌ಲೋಬೊ ಅವರು, ಸಂಸ್ಥಾಪಕರ ದೃಷ್ಟಿಕೋನ ಮತ್ತು ಧ್ಯೇಯವನ್ನು ಸ್ಮರಿಸುವ ಉದ್ದೇಶದಿಂದ ಸಂಸ್ಥಾಪಕರ ದಿನಾಚರಣೆಯನ್ನು ಪ್ರಾರಂಭಿಸಲಾಗಿದೆ ಎಂದು ತಿಳಿಸಿದರು.

ತಮ್ಮ ಭಾಷಣದಲ್ಲಿ ವಂ. ಡಾ. ಪ್ರವೀಣ್ ಮಾರ್ಟಿಸ್ ಅವರು ಅಧ್ಯಕ್ಷರಾದ ಶ್ರೀ ಅನಿಲ್ ಲೋಬೊ ಅವರ ನಾಯಕತ್ವವನ್ನು ಶ್ಲಾಘಿಸಿ, ಬ್ಯಾಂಕ್ ಕಳೆದ ಕೆಲವು ವರ್ಷಗಳಲ್ಲಿ ಸಾಧಿಸಿರುವ ಪರಿವರ್ತನೆಯನ್ನು ಮೆಚ್ಚಿದರು. ಆರ್ಥಿಕವಾಗಿ ಹಿಂದುಳಿದ ವಿದ್ಯಾರ್ಥಿಗಳಿಗೆ ಉನ್ನತ ಶಿಕ್ಷಣಕ್ಕಾಗಿ ನೆರವಾಗುವ "ವಿದ್ಯಾಧನ ವಿದ್ಯಾರ್ಥಿ ಕ್ರೆಡಿಟ್ ಯೋಜನೆ"ಯನ್ನು ವಿಶೇಷವಾಗಿ ಪ್ರಶಂಸಿಸಿದರು. ಎಂಸಿಸಿ ಬ್ಯಾಂಕ್ ಸಾಮಾಜಿಕ ಹೊಣೆಗಾರಿಕೆಯನ್ನು ನಿಭಾಯಿಸುವ ಜನಪರ ಬ್ಯಾಂಕಾಗಿ ಹೊರಹೊಮ್ಮಿದೆ ಎಂದು ಹೇಳಿದರು.

ಡಾ. ಮೀರಾ ಅರನ್ಹಾ ಅವರು "ವಿದ್ಯಾಧನ ಶಿಕ್ಷಣ ಯೋಜನೆ"ಯನ್ನು ಉದ್ಘಾಟಿಸಿದರು. ತಮ್ಮ ಭಾಷಣದಲ್ಲಿ ಕಳೆದ ಏಳು–ಎಂಟು ವರ್ಷಗಳಲ್ಲಿ ಬ್ಯಾಂಕ್ ಸಾಧಿಸಿರುವ ಪ್ರಗತಿಯನ್ನು ಅಭಿನಂದಿಸಿದ ಅವರು, ಬ್ಯಾಂಕಿನ ಭವಿಷ್ಯ ಬೆಳವಣಿಗೆಯಲ್ಲಿ ಕೃತಕ ಬುದ್ಧಿಮತ್ತೆ, ಹವಾಮಾನ ಹಾಗೂ ESG ಅಪಾಯ ನಿರ್ವಹಣೆ ಮತ್ತು ವಿಶ್ವಾಸದ ಕಾಪಾಡುವಿಕೆ ಪ್ರಮುಖ ಪಾತ್ರವಹಿಸಲಿದೆ ಎಂದು ಹೇಳಿದರು. ಶ್ರೀ ರಾಯ್ ಕ್ಯಾಸ್ಟೆಲಿನೋ ಅವರು ಕೇವಲ ಏಳು ವರ್ಷಗಳಲ್ಲಿ ಬ್ಯಾಂಕ್ ಮೂರು ಪಟ್ಟು ಬೆಳವಣಿಗೆ ಸಾಧಿಸಿರುವುದಕ್ಕೆ ಆಡಳಿತ ಮಂಡಳಿ ಮತ್ತು ಸಿಬ್ಬಂದಿಯನ್ನು ಅಭಿನಂದಿಸಿದರು. ಶ್ರೀ ಐಸಾಕ್ ವಾಸ್ ಅವರು ಸಂಪಾದಕರಾದ ಡಾ.ಜೆರಾಲ್ಡ್ ಪಿಂಟೊ ಅವರೊಂದಿಗೆ ಬ್ಯಾಂಕಿನ ಬುಲೆಟಿನ್ ಬಿಡುಗಡೆ ಮಾಡಿದರು. ತಮ್ಮ ಭಾಷಣದಲ್ಲಿ ಸಂಸ್ಥಾಪಕರು ಬ್ಯಾಂಕನ್ನು ಸಮುದಾಯದ ವಿಶ್ವಾಸದ ಸಂಕೇತವಾಗಿ ಸ್ಥಾಪಿಸಿದ್ದಾರೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಹೊಸದಾಗಿ ಅರ್ಹತೆ ಪಡೆದ ಚಾರ್ಟರ್ಡ್ ಅಕೌಂಟೆಂಟ್ಸ್‌ಗಳಾದ ಸಿಎ ಮ್ಯೂರಿಯಲ್ ಮಸ್ಕರೇನ್ಹಾಸ್ ಹಾಗೂ ಸಿಎ ಜಾಯ್ಸನ್ ಡಿಸೋಜಾ ಅವರನ್ನು ಸನ್ಮಾನಿಸಲಾಯಿತು. ಕೇಂದ್ರ ಸೆಂಟ್ರಲ್ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪುರಸ್ಕೃತ ಶ್ರೀ ಹೆನ್ರಿ ಮೆಂಡೋನ್ಕಾ (ಎಚ್. ಎಂ.ಪೆರ್ನಾಲ್), ಕಿತ್ತೂರು ರಾಣಿ ಚೆನ್ನಮ್ಮ ಪ್ರಶಸ್ತಿ ಪುರಸ್ಕೃತೆ ಶ್ರೀಮತಿ ರಿಶೆಲ್ ಫೆರ್ನಾಂಡಿಸ್ ಹಾಗೂ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಾದ ಡಾ. ಜೋಸೆಫ್ ಲೋಬೊ, ಶ್ರೀ ಝೇವಿಯರ್ ಡಿಸೋಜಾ ಮತ್ತು ಶ್ರೀ ಪ್ರೇಮ್ ಜೆ.ಮೊರಾಸ್ ಅವರನ್ನು ಗೌರವಿಸಲಾಯಿತು. ಕಾರ್ಯಕ್ರಮವು ಶ್ರೀ ಮನೋಜ್ ಲೋಪೆಸ್ ಮತ್ತು ತಂಡದವರ ಪ್ರಾರ್ಥನೆಯೊಂದಿಗೆ ಆರಂಭವಾಯಿತು. ಬ್ಯಾಂಕಿನ ಮಹಾಪ್ರಬಂಧಕರಾದ ಶ್ರೀ ಸುನಿಲ್ ಮೆನೆಜಸ್ ವಂದನಾರ್ಪಣೆ ಸಲ್ಲಿಸಿದರು. ಕಾರ್ಯಕ್ರಮವನ್ನು ಶ್ರೀ ಜೇಸನ್ ಶಿರ್ತಾಡಿ ನಿರೂಪಿಸಿದರು.

ಕಾರ್ಯಕ್ರಮದಲ್ಲಿ ನಿರ್ದೇಶಕರಾದ ಶ್ರೀ ಆಂಡ್ರೂ ಡಿಸೋಜಾ, ಶ್ರೀ ಹೆರಾಲ್ಡ್ ಮೊಂತೋರೊ, ಶ್ರೀ ಅನಿಲ್ ಪತ್ರಾವೊ, ಶ್ರೀ ಡೇವಿಡ್ ಡಿಸೋಜಾ, ಶ್ರೀ ಜೆ.ಪಿ. ರೋಡ್ರಿಗಸ್, ಶ್ರೀ ರೋಶನ್ ಡಿಸೋಜಾ, ಶ್ರೀ ಮೆಲ್ವಿನ್ ವಾಸ್, ಶ್ರೀ ವಿನ್ಸೆಂಟ್ ಲಸ್ರಾದೊ, ಶ್ರೀ ಸುಶಾಂತ್ ಸಾಲ್ಡಾನ್ಹಾ, ಶ್ರೀಮತಿ ಐರಿನ್ ರೆಬೆಲ್ಲೊ, ಶ್ರೀ ಆಲ್ವಿನ್ ಪಿ. ಮೊಂತೇರೊ, ಶ್ರೀ ಫೆಲಿಕ್ಸ್ ಡಿಕ್ರೂಜ್, ಡಾ. ಜೆರಾಲ್ಡ್ ಪಿಂಟೊ ಹಾಗೂ ಶ್ರೀ ಸಿ.ಜಿ. ಪಿಂಟೊ ಉಪಸ್ಥಿತರಿದ್ದರು.

## ಶ್ರೀ ಸುಬ್ರಮಣೇಶ್ವರ ಕೋ–ಆಪರೇಟಿವ್ ಬ್ಯಾಂಕಿನಲ್ಲಿ SSCBL Mpassbook Appಗೆ ಚಾಲನೆ




**ಬೆಂಗಳೂರು:** ಶ್ರೀ ಸುಬ್ರಮಣೇಶ್ವರ ಕೋ–ಆಪರೇಟಿವ್ ಬ್ಯಾಂಕ್ ಲಿಮಿಟೆಡ್ 1971ನೇ ಇಸವಿಯಲ್ಲಿ ಸ್ಥಾಪನೆಯಾಗಿ ಕೇಂದ್ರ ಕಛೇರಿಯ ಜೊತೆಗೆ ಬೆಂಗಳೂರಿನ ವಿವಿಧ ಬಡಾವಣೆಗಳಲ್ಲಿ ಒಂಬತ್ತು ಶಾಖೆಗಳನ್ನು ಹೊಂದಿದ್ದು, ಎಲ್ಲಾ ಶಾಖೆಗಳನ್ನು ಗಣಕೀಕರಣಗೊಳಿಸುವುದರೊಂದಿಗೆ ಕಾರ್ಯನಿರ್ವಹಿಸುತ್ತಿದೆ.

ನಮ್ಮ ಬ್ಯಾಂಕು ಡಿಜಿಟಲ್ ರೂಪಾಂತರದ ಪ್ರಯಾಣದ ಮೊದಲ ಹೆಜ್ಜೆಯಾಗಿ ತಡೆರಹಿತ ಮತ್ತು ಪಾರದರ್ಶಕ ಬ್ಯಾಂಕಿಂಗ್ ಸೇವೆಯನ್ನು ಒದಗಿಸುವ ನಮ್ಮ ನಿರಂತರ ಪ್ರಯತ್ನದ ಭಾಗವಾಗಿ ನೂತನ "SSCBL Mpassbook Appಗೆ ಬ್ಯಾಂಕಿನ ಅಧ್ಯಕ್ಷರಾದ ಡಿ.ಆರ್. ವಿಜಯಸಾರಥಿ ರವರು ಚಾಲನೆ ನೀಡಿದರು. ಬಳಿಕ ಮಾತನಾಡಿದ ಅವರು, ನೂತನ ಆ್ಯಪ್‌ನಲ್ಲಿ ಗ್ರಾಹಕರು ತಮ್ಮ ಖಾತೆಯ ಬ್ಯಾಲೆನ್ಸ್ ಪರಿಶೀಲನೆ, ಮಿನಿ ಸ್ಟೇಟ್ಮೆಂಟ್ ವೀಕ್ಷಣೆ, ಪೂರ್ಣ ಸ್ಟೇಟ್ಮೆಂಟ್ ಡೌನ್‌ಲೋಡ್, ಬಡ್ಡಿದರಗಳ ಮಾಹಿತಿ ಸೇರಿ ವಿವಿಧ ಸೇವೆ ದಿನದ 24 ಗಂಟೆಗಳ ಕಾಲ ಪಡೆಯಬಹುದು. ಆಂಡ್ರಾಯ್ಡ್ ಸ್ಮಾರ್ಟ್‌ಫೋನ್ ಬಳಕೆದಾರರಿಗೆ ಈ ಆಪ್ ಲಭ್ಯವಿದ್ದು, ವೀವ್ ಓನ್ಲಿ ಮೂಡ್‌ನಲ್ಲಿ ಸೇವೆ ನೀಡಲಾಗುತ್ತಿದೆ ಎಂದರು. ಬ್ಯಾಂಕಿನ ಉಪಾಧ್ಯಕ್ಷರಾದ ಡಾ. ಎಂ. ರಂಗಧಾಮ ಶೆಟ್ಟಿ, ನಿರ್ದೇಶಕರುಗಳಾದ ಬಿ.ಎಲ್.ವೆಂಕಟಾಚಲಪತಿ, ಪಿ.ರುದ್ರಮೂರ್ತಿ, ಎಸ್.ಸತ್ಯಮೂರ್ತಿ, ಎಂ.ಸಿ. ಪಾಲನೇತ್ರಪ್ಪ, ಜಿ.ಲೋಹಿತ್, ನಂಜೇಗೌಡ, ಪಿ.ಕೆ.ರವೀಂದ್ರ, ಎನ್. ಮಹಾಲಕ್ಷ್ಮಿ, ಎಚ್.ಮಾರುತಿ, ಅನ್ನಪೂರ್ಣಮ್ಮ, ಜಯಲಕ್ಷ್ಮಿ ಜಿ.ತೋಟಗೇರ, ಪ್ರಭಾರ ಪ್ರಧಾನ ವ್ಯವಸ್ಥಾಪಕ ಕೆ.ಎನ್. ಕೃಷ್ಣಯ್ಯ ಶೆಟ್ಟಿ, ಪೂರ್ಣಾವಧಿ ಸಲಹೆಗಾರ ಬಿ.ಆರ್.ನಾಗರಾಜ್ ಇದ್ದರು.

## ಶ್ರೀ ಸುಧಾ ಕೋ–ಆಪರೇಟಿವ್ ಬ್ಯಾಂಕಿನ ಶಾಖೆಯನ್ನು ವಿಜಯನಗರದಿಂದ ನಾಗರಭಾವಿ ಮುಖ್ಯರಸ್ತೆಗೆ ಸ್ಥಳಾಂತರಿಸಿ ಉದ್ಘಾಟಿಸಲಾಯಿತು



**ಬೆಂಗಳೂರು :** ಬೆಂಗಳೂರಿನ ಪ್ರತಿಷ್ಠಿತ ಸಹಕಾರಿ ಬ್ಯಾಂಕುಗಳಲ್ಲೊಂದಾದ ಶ್ರೀ ಸುಧಾ ಕೋ–ಆಪರೇಟಿವ್ ಬ್ಯಾಂಕ್ ಬೆಂಗಳೂರಿನಲ್ಲಿ 10 ಶಾಖೆ ಹಾಗೂ ಮೈಸೂರಿನಲ್ಲಿ 01 ಶಾಖೆಯನ್ನು ಹೊಂದಿದ್ದು, ಕಳೆದ 50 ವರ್ಷಗಳಿಂದ ಗ್ರಾಹಕಸ್ನೇಹಿ ಗುಣಮಟ್ಟದ ಬ್ಯಾಂಕಿಂಗ್ ಸೇವೆಯನ್ನು ಸಲ್ಲಿಸಲಾಗುತ್ತಿದ್ದು, ಸಧೃಡ ಆರ್ಥಿಕ ತಳಪಾಯವನ್ನು ಹೊಂದಿದೆ.

ಗ್ರಾಹಕರಿಗೆ ಪರಿಸರ ಸ್ನೇಹಿ ಹಾಗೂ ಉತ್ತಮ ಸೇವೆ ಸಲ್ಲಿಸುವ ಉದ್ದೇಶದಿಂದ ವಿಜಯನಗರದ ಬಸ್ ನಿಲ್ದಾಣದ ಹತ್ತಿರವಿದ್ದ ಶಾಖೆಯನ್ನು ನಾಗರಭಾವಿ ಮುಖ್ಯರಸ್ತೆಗೆ ಇದೆ ದಿನಾಂಕ:11.05.2026 ರಂದು, ಶ್ರೀ ಎಂ.ಕೃಷ್ಣಪ್ಪ ಮಾಜಿ ವಸತಿ ಸಚಿವರು ಹಾಗೂ ಶಾಸಕರು, ವಿಜಯನಗರ ಕ್ಷೇತ್ರ ವಿಜಯನಗರ ಇವರ ಅಮೃತ ಹಸ್ತದಿಂದ ಸ್ಥಳಾಂತರಗೊಂಡ ಶಾಖೆಯನ್ನು ಉದ್ಘಾಟಿಸಲಾಯಿತು.

ಮುಖ್ಯ ಅತಿಥಿಯಾಗಿ ಆಗಮಿಸಿರುವ ಗೋವಿಂದರಾಜನಗರ ಕ್ಷೇತ್ರದ ಶಾಸಕರಾದ ಶ್ರೀ ಪ್ರಿಯಕೃಷ್ಣ ರವರು ಸಮಾರಂಭಕ್ಕೆ ಆಗಮಿಸಿ ಶುಭ ಹಾರಿಸಿರುತ್ತಾರೆ.

ಈ ಶುಭ ಸಂದರ್ಭದಲ್ಲಿ ಬ್ಯಾಂಕಿನ ಅಧ್ಯಕ್ಷರಾದ ಸಹಕಾರ ರತ್ನ ಪುರಸ್ಕೃತ ಡಾ. ಎಂ.ತಿಮ್ಮೇಗೌಡ, ಉಪಾಧ್ಯಕ್ಷರಾದ ಶ್ರೀ ವಾಸನ್ ಟಿ., ನಿರ್ದೇಶಕರುಗಳಾದ ಶ್ರೀ ಮುರುಳೀಧರ, ಶ್ರೀ ಜಿ. ಓ. ಕೃಷ್ಣ, ಶ್ರೀಮತಿ ಅಮಿತಾ ಆನಂದ್, ಶ್ರೀಮತಿ ವಿಜಯಲಕ್ಷ್ಮಿ ಮುರಳೀಧರ, ಶ್ರೀ ಸಂಜೀವಯ್ಯ ಕೆ., ಶ್ರೀ ಜಯರಾಮ ಎನ್., ಶ್ರೀ.ಶಿವಕುಮಾರ್ ಟಿ., ಶ್ರೀ ಜಯರಾಮ್ ಹೆಚ್. ಆರ್., ಶ್ರೀ ಪ್ರಭುದ್ ಜೆ. ಶೆಟ್ಟಿ, ಶ್ರೀ ಎಂ.ನಾಗರಾಜು ಹಾಗೂ ಶಶಿಕಿರಣ್ ಎನ್. ಯು. ರವರುಗಳು ಉಪಸ್ಥಿತರಿದ್ದರು.

# ಡಾಲರ್ ಎದುರು ರೂಪಾಯಿ ಸರ್ವಪತನ, 10 ತಿಂಗಳ ಗರಿಷ್ಠ ಮಟ್ಟಕ್ಕೇರಿದ ಹಣದುಬ್ಬರ

**ಹೊಸದಿಲ್ಲಿ :** ಮಧ್ಯಪ್ರಾಚ್ಯದಲ್ಲಿನ ಉದ್ವಿಗ್ನತೆಯಿಂದಾಗಿ ಜಾಗತಿಕ ತೈಲ ಮಾರುಕಟ್ಟೆಯಲ್ಲಿ ಭಾರಿ ಅನಿಶ್ಚಿತತೆ ಎದುರಾಗಿದ್ದು, ಈ ನಡುವೆ ಮುಂದೆ ಭಾರತ ರೂಪಾಯಿ ಮೌಲ್ಯ ದುರ್ಬಲಗೊಳುತ್ತಿದ್ದು, ಆರ್ಥಿಕ ಸಂಕಷ್ಟ ಎದುರಾಗುವ ಆತಂಕವನ್ನು ಹೆಚ್ಚಿಸಿದೆ. ಈಗಾಗಲೇ ಡಾಲರ್‌ಎದುರು ಭಾರತೀಯ ಕರೆನ್ಸಿ ಮೌಲ್ಯ 92.286ರೂ ಕುಸಿತ ಕಂಡಿದ್ದು, 93 ರೂ. ಸಮೀಪಕ್ಕೆ ದಾಪುಗಾಲು ಹಾಕುತ್ತಿದೆ. ಈ ಬೆನ್ನಲ್ಲೇ, ಸದ್ಯ ದೇಶದಲ್ಲಿ ಹಣದುಬ್ಬರವು ಸಹ 10 ತಿಂಗಳ ಗರಿಷ್ಠ ಮಟ್ಟಕ್ಕೆ ಏರಿಕೆಯಾಗಿದೆ.

ಈ ಪರಿಸ್ಥಿತಿ ಹೀಗೆ ಮುಂದುವರೆದಲ್ಲಿ ಹಣದುಬ್ಬರ ಮತ್ತು ಕರೆನ್ಸಿ ಅಸ್ಥಿರತೆಯನ್ನು ಹೆಚ್ಚುಮಾಡಲಿದ್ದು, ಜನ ಸಾಮಾನ್ಯರಿಗೆ ಇಂಧನ, ಆಹಾರದಿಂದ ಹಿಡಿದು ಎಲೆಕ್ಟ್ರಾನಿಕ್ಸ್ ಮತ್ತು ಪ್ರಯಾಣದವರೆಗೆ ದೈನಂದಿನ ಖರ್ಚುಗಳು ಕ್ರಮೇಣ ದುಬಾರಿಯಾಗಬಹುದು. ಆರ್ಥಿಕತೆ ಜನರ ಮೇಲೆ ಬಾರಿ ಪರಿಣಾಮ ಉಂಟುಮಾಡುತ್ತಿದೆ.

### ತೈಲ ಬೆಲೆ ಏರಿಕೆಯಿಂದಾಗಿ ದುರ್ಬಲಗೊಳ್ಳುತ್ತಿರುವ ರೂಪಾಯಿ

ಮೊದಲನೆಯದಾಗಿ, ಜಾಗತಿಕ ಅನಿಶ್ಚಿತತೆಯಿಂದಾಗಿ ತೈಲ ಬೆಲೆ ಪ್ರತಿ ಒಂದು ಬ್ಯಾರಲ್‌ಗೆ $100 ಗಡಿ ದಾಟಿದ್ದು, ಇದರಿಂದಾಗಿ ಈಗಾಗಲೇ ದುರ್ಬಲಗೊಂಡಿದ್ದ ಭಾರತೀಯ ಕರೆನ್ಸಿ ಮೇಲೆ ಮತ್ತಷ್ಟು ಒತ್ತಡ ಹೆಚ್ಚಾಗಿದೆ. ಇದರಿಂದಾಗಿ ಸದ್ಯ ಡಾಲರ್ ಎದುರು ರೂಪಾಯಿ ಮೌಲ್ಯ ಕುಸಿತವಾಗಿದೆ. ಇನ್ನು, ಅನಿಶ್ಚಿತತೆಯ ಕಾರಣದಿಂದಾಗಿ ಜಾಗತಿಕ ಹೂಡಿಕೆದಾರರು ತಮ್ಮ ಹೂಡಿಕೆಗಳನ್ನು ಮಾರಾಟ ಮಾಡುತ್ತಿದ್ದಾರೆ. ಅಮೆರಿಕನ್ ಡಾಲರ್ ಜಾಗತಿಕವಾಗಿ ಬಲಗೊಂಡಿರುವುದರಿಂದ ಭಾರತ ತೈಲ ಆಮದು ಮಾಡಿಕೊಳ್ಳುವ ವೆಚ್ಚ ಸಹ ಹೆಚ್ಚಾಗಲಿದೆ.

### 10 ತಿಂಗಳ ಗರಿಷ್ಠ ಮಟ್ಟ ತಲುಪಿದ ಹಣದುಬ್ಬರ

ಮಾರ್ಚ್12ರಂದು ಬಿಡುಗಡೆಯಾದ ದತ್ತಾಂಶದ ಪ್ರಕಾರ, ಗ್ರಾಹಕ ಬೆಲೆ ಸೂಚ್ಯಂಕದಿಂದ ಅಳೆಯಲಾದ ಚಿಲ್ಲರೆ ಹಣದುಬ್ಬರವು ಫೆಬ್ರವರಿ ತಿಂಗಳಲ್ಲಿ ಗರಿಷ್ಠ ಮಟ್ಟಕ್ಕೆ ಏರಿಕೆಯಾಗಿದೆ. ಇನ್ನು, ಆಹಾರ ಹಣದುಬ್ಬರ ಕೂಡ ಏರಿಕೆಯಾಗಿದ್ದು, ಜನವರಿಯಲ್ಲಿ ಶೇ.2.13 ಇದ್ದ ಆಹಾರ ಹಣದುಬ್ಬರ ಫೆಬ್ರವರಿಯಲ್ಲಿ ಶೇ.3.47ಕ್ಕೆ ಏರಿಕೆಯಾಗಿದೆ. ಇನ್ನು, ಕಳೆದ 4 ತಿಂಗಳುಗಳಿಂದ ಎಲ್ಲ ಅಗತ್ಯ ವಸ್ತುಗಳ ಬೆಲೆಗಳು ಸತತವಾಗಿ ಏರಿಕೆಯನ್ನು ಕಾಣುತ್ತಿದ್ದು, ಫೆಬ್ರವರಿಯಲ್ಲಿ ಸೂಚ್ಯಂಕ 104.57ಕ್ಕೆ ಏರಿಕೆಯಾಗಿದ್ದು, ಹಣ್ಣು–ತರಕಾರಿ ಮತ್ತು ಕೊಬ್ಬರಿ ಸೇರಿದಂತೆ ಚಿನ್ನ ಹಾಗೂ ಬೆಳ್ಳಿಯಂತಹ ಆಭರಣಗಳು ಸಹ ಬೆಲೆ ಏರಿಕೆಯ ಒತ್ತಡಕ್ಕೆ ಗುರಿಯಾಗಿವೆ.

ನಗರಕ್ಕಿಂತ ಹೆಚ್ಚಾಗಿ ಗ್ರಾಮೀಣ ಪ್ರದೇಶದಲ್ಲಿನ ಹಣದುಬ್ಬರದಲ್ಲಿ ಏರಿಕೆ ಕಂಡಿದ್ದು, ಗ್ರಾಮೀಣ ಭಾಗದ ಹಣದುಬ್ಬರ ಸೂಚ್ಯಂಕ ಶೇ.3.37ಕ್ಕೆ ಏರಿಕೆಯಾದರೆ, ನಗರ ಭಾಗದಲ್ಲಿನ ಹಣದುಬ್ಬರ ಶೇ.3.02ಕ್ಕೆ ಏರಿಕೆಯಾಗಿದೆ. ಇನ್ನು ಹಣದುಬ್ಬರ ಸೂಚ್ಯಂಕಗಳು ಹೀಗೆ ಮುಂದುವರೆದರೆ, ಭವಿಷ್ಯದಲ್ಲಿ ಅನಿಶ್ಚಿತತೆ ಸೃಷ್ಟಿಸುವ ಆತಂಕ ಎದುರಾಗಬಹುದು. ಮುಂದಿನ ದಿನಗಳಲ್ಲಿ ಮನೆಯ ಬಜೆಟ್ ಮೇಲೆ ಹೇಗೆ ಪರಿಣಾಮ ಬೀರಲಿದೆ.

### 1. ಇಂಧನ ಹಾಗೂ ಸಾರಿಗೆ ವೆಚ್ಚಗಳು

ಸದ್ಯದ ಪರಿಸ್ಥಿತಿಯಲ್ಲಿ ಜಾಗತಿಕ ತೈಲ ಬೆಲೆಯಲ್ಲಿ ಏರಿಕೆ ಕಾಣುತ್ತಿದ್ದು, ಕಚ್ಚಾ ತೈಲವು ಬ್ಯಾರೆಲ್‌ಗೆ $100 ಕ್ಕಿಂತ ಹೆಚ್ಚಿರುವ ಈ ಪರಿಸ್ಥಿತಿ ಹೀಗೆ ಮುಂದುವರೆದರೆ, ಅಡುಗೆ ಅನಿಲ ಬೆಲೆಗಳು ಕಾಲಾನಂತರದಲ್ಲಿ ಏರಿಕೆಯ ಒತ್ತಡವನ್ನು ಎದುರಿಸಬೇಕಾಗುತ್ತದೆ. ಹೀಗೆ ಇಂಧನ ಬೆಲೆಗಳು ಹೆಚ್ಚದರೆ ಸಾರಿಗೆ ವೆಚ್ಚಗಳು ಹಾಗೂ ಲಾಜಿಸ್ಟಿಕ್ಸ್ ಮೇಲಿನ ವೆಚ್ಚಗಳನ್ನು ಸಹ ಹೆಚ್ಚಿಸುವ ಅಗತ್ಯತೆ ಎದುರಾಗಲಿದ್ದು, ಆರ್ಥಿಕ ಹೊರೆ ಹೆಚ್ಚಲಿದೆ.

### 2. ಆಹಾರ ಬೆಲೆಗಳು

ಇಂಧನ ವೆಚ್ಚಗಳು ರಸಗೊಬ್ಬರಗಳಿಂದ ಹಿಡಿದು ಸಾಗಣೆಯವರೆಗೆ ಎಲ್ಲದರ ಮೇಲೆ ಪ್ರಭಾವ ಬೀರುತ್ತವೆ. ಹೀಗೆ ರಸಗೊಬ್ಬರ ಹಾಗೂ ಆಹಾರ ಧಾನ್ಯಗಳ ಸಾಗಾಟ ಎಲ್ಲದಕ್ಕೂ ಹೆಚ್ಚಿನ ವೆಚ್ಚ ಭರಿಸಿಬೇಕಾಗುತ್ತದೆ. ಇದು ತರಕಾರಿಗಳು, ಧಾನ್ಯಗಳು ಮತ್ತು ಪ್ಯಾಕ್ ಮಾಡಿದ ಆಹಾರಗಳ ಬೆಲೆಯನ್ನು ಹೆಚ್ಚಿಸಲಿದ್ದು ಗ್ರಾಹಕರ ಮೇಲೆ ಹೊರೆಯನ್ನು ಹೆಚ್ಚಾಗಲಿದೆ.

### 3. ಆಮದು ಮಾಡಿಕೊಳ್ಳುವ ಸರಕುಗಳು ದುಬಾರಿಯಗಲಿವೆ

ಡಾಲರ್ ಎದುರು ರೂಪಾಯಿ ದುರ್ಬಲವಾಗುತ್ತಿದೆ. ಇನ್ನು, ಭಾರತ ಖಾದ್ಯ ತೈಲಗಳು ಮತ್ತು ರಸಗೊಬ್ಬರಗಳಿಂದ ಎಲೆಕ್ಟ್ರಾನಿಕ್ಸ್ ಮತ್ತು ಕೈಗಾರಿಕಾ ಘಟಕಗಳವರೆಗೆ ವ್ಯಾಪಕ ಶ್ರೇಣಿಯ ಗ್ರಾಹಕ ಸರಕುಗಳು ಮತ್ತು ಒಳಹರಿವುಗಳನ್ನು ಆಮದು ಮಾಡಿಕೊಳ್ಳುತ್ತದೆ. ನಾವು ಈ ಆಮದು ವಸ್ತುಗಳನ್ನು ಡಾಲರ್ ಮೂಲಕ ಖರೀದಿ ಮಾಡುವುದರಿಂದ ಹೀಗೆ ರೂಪಾಯಿ ಮೌಲ್ಯ ಕುಸಿತ ಕಾಣುತ್ತಾ ಹೋದರೆ ಆರ್ಥಿಕ ಹೊರೆ ಹೆಚ್ಚಾಗಲಿದ್ದು ಸರಕುಗಳಿಗೆ ಜನರು ಹೆಚ್ಚಿನ ಹಣವನ್ನು ಭರಿಸಬೇಕಾಗುತ್ತದೆ.

### 4. ವಿದೇಶ ಪ್ರಯಾಣ ಮತ್ತು ಶಿಕ್ಷಣ

ರೂಪಾಯಿ ಮೌಲ್ಯ ದುರ್ಬಲಗೊಂಡಂತೆ ವಿದೇಶಿ ಪ್ರಯಾಣದ ವೆಚ್ಚವು ಸಹ ಅಧಿಕವಾಗಲಿದೆ. ಇದರೊಂದಿಗೆ ವಿದೇಶಗಳಲ್ಲಿ ಉನ್ನತ ವ್ಯಾಸಂಗ ಮಾಡಲು ಬಯಸುವವರಿಗೂ ಆರ್ಥಿಕ ಹೊರೆ ಹೆಚ್ಚಲಿದ್ದು, ವಿದೇಶಿ ಶಿಕ್ಷಣ ಶುಲ್ಕಗಳು ದುಬಾರಿಯಾಗಲಿವೆ.

### ಹಣದುಬ್ಬರಕ್ಕೂ ಹಾಗೂ ಕರೆನ್ಸಿ ಮೌಲ್ಯಕ್ಕೂ ಇರುವ ಸಂಬಂಧ

ಒಂದು ದೇಶದಲ್ಲಿನ ಬೆಲೆಗಳು ಮತ್ತೊಂದು ದೇಶಕ್ಕಿಂತ ಸ್ಥಿರವಾಗಿ ಹಾಗೂ ವೇಗವಾಗಿ ಏರಿದರೆ, ಖರೀದಿ ಶಕ್ತಿಯ ಸಮಾನತೆಯನ್ನು ಕಾಪಾಡಿಕೊಳ್ಳಲು ಅದರ ಕರೆನ್ಸಿ ಕಾಲಾನಂತರದಲ್ಲಿ ದುರ್ಬಲಗೊಳ್ಳುತ್ತದೆ. ಅಂದರೆ, ಹೆಚ್ಚಿನ ಹಣದುಬ್ಬರವು ಕ್ರಮೇಣ ಆ ದೇಶದ ಕರೆನ್ಸಿ ತನ್ನ ಮೌಲ್ಯವನ್ನು ಕಳೆದುಕೊಳ್ಳುವಂತೆ ಮಾಡುತ್ತದೆ. ಇನ್ನು, ಅಲ್ಪಾವಧಿಯಲ್ಲಿ ತೈಲ ಬೆಲೆಗಳು, ಬಂಡವಾಳ ಹರಿವುಗಳು, ಬಡ್ಡಿದರದ ನಿರೀಕ್ಷೆಗಳು ಮತ್ತು ಜಾಗತಿಕ ಅಪಾಯದ ಭಾವನೆಗಳು ಕರೆನ್ಸಿಯಲ್ಲಿನ ಅಸ್ಥಿರತೆಗೆ ಕಾರಣವಾಗುತ್ತದೆ. ಹಿಂದಿನ ದಶಕಗಳಿಗೆ ಹೋಲಿಸಿದರೆ ಭಾರತದ ಹಣದುಬ್ಬರ ಹೆಚ್ಚಾಗಿದ್ದು, ಕರೆನ್ಸಿಯಲ್ಲಿ ವ್ಯತ್ಯಾಸಗಳನ್ನು ಕಾಣಿಸಿಕೊಳ್ಳುವಂತೆ ಮಾಡುತ್ತಿವೆ. ಇದು ಡಾಲರ್ ಎದುರು ಸ್ಥಿರವಾಗಿ ರೂಪಾಯಿ ಮೌಲ್ಯ ಕುಸಿಯಲು ಇರುವ ಒಂದು ಪ್ರಮುಖ ಕಾರಣವಾಗಿದೆ.




## ನಿಮ್ಮ ಪ್ರಶ್ನೆ ನಮ್ಮ ಉತ್ತರ



▸▸ **ಸುಧಾಕರ್ ಭಟ್**, ಬ್ಯಾಂಕಿಂಗ್ ಸಲಹೆಗಾರರು.

**01. ನಮ್ಮ ಒಬ್ಬ ನಿರ್ದೇಶಕರು ಬ್ಯಾಂಕಿನ ಎಲ್ಲ ಸಾಲಗಾರರ ಪಟ್ಟಿ ಮತ್ತು ಅದಕ್ಕೆ ಸಂಬಂಧಿಸಿದ ಮಾಹಿತಿಯನ್ನು ಕೇಳಿದ್ದಾರೆ. ಈ ಮಾಹಿತಿಯನ್ನು ನಿರ್ದೇಶಕರಿಗೆ ಲಿಖಿತವಾಗಿ ನೀಡಬಹುದೇ? ಕರ್ನಾಟಕ ಸಹಕಾರ ಸಂಘಗಳ ಕಾಯ್ದೆಯಲ್ಲಿ ಇದಕ್ಕೆ ಅನುಮತಿ ಇದೆಯೇ?**

**– ಪಟ್ಟಣ ಸಹಕಾರ ಬ್ಯಾಂಕ್ ಲಿ., ಹಾಸನ ಜಿಲ್ಲೆ.**

**ಉತ್ತರ :** ಠೇವಣಿಗಳು, ಸಾಲಗಳು ಮತ್ತು ಮುಂಗಡಗಳಿಗೆ ಸಂಬಂಧಿಸಿದ ವಿಷಯಗಳಿಗೆ ಸಂಬಂಧಿಸಿದಂತೆ ಪಟ್ಟಣ ಸಹಕಾರ ಬ್ಯಾಂಕುಗಳು ಭಾರತೀಯ ರಿಜರ್ವ್ ಬ್ಯಾಂಕ್ ಹೊರಡಿಸಿದ ಮಾರ್ಗಸೂಚಿಗಳು / ನಿರ್ದೇಶನಗಳಿಂದ ಮಾತ್ರ ಮಾರ್ಗದರ್ಶನ ಪಡೆಯುತ್ತವೆ. ನವೆಂಬರ್ 28, 2025ರ ರಿಜರ್ವ್ ಬ್ಯಾಂಕಿನ ಸಹಕಾರ ಬ್ಯಾಂಕುಗಳ ಆಡಳಿತಕ್ಕೆ ಸಂಬಂಧಿಸಿದ ನಿರ್ದೇಶನದ ಪ್ಯಾರ 11(1)ರಲ್ಲಿರುವ ಸೂಚನೆಗಳ ಪ್ರಕಾರ, ಮಂಡಳಿಯ ಸಭೆಗಳಲ್ಲಿ ಚರ್ಚಿಸಬೇಕಾದ ಕಾರ್ಯಸೂಚಿಯ ವಿಷಯಗಳಿಗೆ ಸಂಬಂಧಿಸಿದಂತೆ, ನಿರ್ದೇಶಕರು ಬ್ಯಾಂಕಿನ ವಿವಿಧ ಇಲಾಖೆಗಳಿಂದ ದಾಖಲಿಸಲಾದ ಕಾಗದ ಪತ್ರಗಳು / ಕಡತಗಳು / ನೋಟ್‌ಗಳನ್ನು ಪರಿಶೀಲನೆಗಾಗಿ ನೇರವಾಗಿ ಕರೆಯಬಾರದು. ಕಾರ್ಯಸೂಚಿಗಳಿಗೆ ಸಂಬಂಧಿಸಿದ ಕಾಗದ ಪತ್ರಗಳನ್ನು ನೀಡುವ ನಿರ್ಬಂಧವಿರುವಾಗ ಸಂಬಂಧವಿಲ್ಲದ ವಿಷಯಗಳ ಬಗ್ಗೆ ಮಾಹಿತಿ ಕೇಳಿ ಸಲ್ಲಿಸಿದ ವಿನಂತಿಯನ್ನು ಸ್ವೀಕರಿಸಬೇಕಿಲ್ಲ. ಅಧ್ಯಕ್ಷರ ಅನುಮತಿ ಮೇರೆಗೆ ನಿರ್ದೇಶಕರು ಮಂಡಳಿಯ ಸಭೆಯಲ್ಲಿ ಎಲ್ಲಾ ವಿಷಯಗಳನ್ನು ಚರ್ಚಿಸಬಹುದು. ಆದರೆ, ನಿರ್ದೇಶಕರು ಸಾಲಗಾರರ ಪಟ್ಟಿಯನ್ನು ಕೇಳುವಂತಿಲ್ಲ.

**02. ಈಗ ಬೋರ್ಡ್ ಆಫ್ ಮ್ಯಾನೇಜ್‌ಮೆಂಟ್ (ಬಿ.ಒ.ಎಂ)ನಲ್ಲಿ ಆಡಳಿತ ಮಂಡಳಿಯಿಂದ ಪ್ರಾತಿನಿಧ್ಯ ಕೇವಲ ಎರಡು ಸದಸ್ಯರಿರುತ್ತಾರೆ. ಬಿ.ಒ.ಎಂನ ಸದಸ್ಯರ ಒಟ್ಟು ಸಂಖ್ಯೆ ಐದು ಇರುತ್ತದೆ. ಬಿ.ಒ.ಎಂ ನಲ್ಲಿ ಆಡಳಿತ ಮಂಡಳಿಯ ಪ್ರಾತಿನಿಧ್ಯ ಎರಡರಿಂದ ಮೂರು ಸದಸ್ಯರನ್ನು ಮಾಡಬಹುದೇ?**

**– ಪಟ್ಟಣ ಸಹಕಾರ ಬ್ಯಾಂಕ್ ಲಿ., ಬೆಳಗಾವಿ**

**ಉತ್ತರ :** ಬಿ.ಒ.ಎಂನ ಗರಿಷ್ಠ ಸದಸ್ಯರ ಸಂಖ್ಯೆ 12. ಅವರಲ್ಲಿ ಶೇ.50ಕ್ಕಿಂತ ಅಧಿಕ ಸದಸ್ಯರು ಆಡಳಿತ ಮಂಡಳಿಯ ಸದಸ್ಯರಾಗಿರಬಾರದು. ನಿಮ್ಮ ಬೈಲಾ ತಿದ್ದುಪಡಿ ಮಾಡಿ ಬಿ.ಒ.ಎಂ.ನ ಸದಸ್ಯರ ಸಂಖ್ಯೆಯನ್ನು ಐದರಿಂದ ಏಳಕ್ಕೆ ಹೆಚ್ಚಿಸಿ ನಂತರ ಬಿ.ಒ.ಎಂ. ನಲ್ಲಿ ಆಡಳಿತ ಮಂಡಳಿಯಿಂದ ಪ್ರಾತಿನಿಧ್ಯವನ್ನು ಎರಡರಿಂದ ಮೂರಕ್ಕೆ ಹೆಚ್ಚಿಸಬಹುದು.

# ಪಶ್ಚಿಮ ಏಷ್ಯಾ ಯುದ್ಧ ಮುಂದುವರಿದರೆ ಪೆಟ್ರೋಲ್, ಡೀಸೆಲ್ ದರ ಏರಿಕೆ ಅನಿವಾರ್ಯವಾಗಬಹುದು : ರಿಸರ್ವ್ ಬ್ಯಾಂಕ್ ಗವರ್ನರ್

ಮಧ್ಯಪ್ರಾಚ್ಯದಲ್ಲಿ ಉದ್ವಿಗ್ನತೆ ದೀರ್ಘಕಾಲ ಮುಂದುವರಿದರೆ ಭಾರತವು ಕೊನೆಗೂ ಪೆಟ್ರೋಲ್ ಮತ್ತು ಡೀಸೆಲ್ ಬೆಲೆಗಳನ್ನು ಹೆಚ್ಚಿಸಬೇಕಾಗಬಹುದು ಎಂದು ಭಾರತೀಯ ರಿಸರ್ವ್ ಬ್ಯಾಂಕ್‌ನ ಗವರ್ನರ್ ಸಂಜಯ್ ಮಲ್ಹೋತ್ರಾ ಹೇಳಿದ್ದಾರೆ. ಏರುತ್ತಿರುವ ಕಚ್ಚಾ ತೈಲದ ಬೆಲೆಗಳು ದರ ಏರಿಕೆ, ಇಂಧನ ಆಮದುಗಳು ಹಾಗೂ ಒಟ್ಟಾರೆ ಆರ್ಥಿಕತೆಯ ಮೇಲೆ ಒತ್ತಡವನ್ನು ಮುಂದುವರಿಸುತ್ತಿವೆ.

ಪ್ರಸ್ತುತ ಜಾಗತಿಕ ಇಂಧನ ಸಂಕಷ್ಟ ಮತ್ತಷ್ಟು ತೀವ್ರಗೊಂಡರೆ ಸರ್ಕಾರವು ಚಿಲ್ಲರೆ ಇಂಧನ ಬೆಲೆಗಳನ್ನು ಅನಿಯಮಿತವಾಗಿ ಸ್ಥಿರವಾಗಿರಿಸಲು ಸಾಧ್ಯವಾಗುವುದಿಲ್ಲ ಎಂದು ಆರ್‌ಬಿಐ ಗವರ್ನರ್ ಹೇಳಿದ್ದಾರೆ. ಇದು ಇನ್ನೂ ದೀರ್ಘಕಾಲ ಮುಂದುವರಿದರೆ, ಸರ್ಕಾರವು ಬೆಲೆ ಏರಿಕೆಯ ಕೆಲವು ಭಾಗವನ್ನು ಜನರ ಮೇಲೆ ವರ್ಗಾಯಿಸುವುದು ಪರಿಸ್ಥಿತಿಯ ಪ್ರಶ್ನೆಯಾಗಿರುತ್ತದೆ ಎಂದು ಮಲ್ಹೋತ್ರಾ ಸ್ವಿಟ್ಜರ್ಲ್ಯಾಂಡ್‌ನಲ್ಲಿ Swiss National Bank ಮತ್ತು International Monetary Fund ಆಯೋಜಿಸಿದ್ದ ಸಮ್ಮೇಳನದಲ್ಲಿ ಹೇಳಿದರು.

ಜಗತ್ತಿನ ಮೂರನೇ ಅತಿದೊಡ್ಡ ತೈಲ ಬಳಕೆದಾರ ರಾಷ್ಟ್ರವಾದ ಭಾರತವು, ಹಾರ್ಮುಜ್ ಜಲಸಂಧಿ ಸುತ್ತಲಿನ ಉದ್ವಿಗ್ನತೆಯಿಂದ ಇಂಧನ ಸರಬರಾಜು ವ್ಯತ್ಯಯಗೊಂಡು ಕಚ್ಚಾ ತೈಲದ ಬೆಲೆಗಳು ತೀವ್ರ ಏರಿಕೆಯಾದ ನಂತರ ಹೆಚ್ಚುತ್ತಿರುವ ಒತ್ತಡವನ್ನು ಎದುರಿಸುತ್ತಿದೆ.

ಈ ಪ್ರಮುಖ ಸಾಗಾಟ ಮಾರ್ಗದ ಅಡಚಣೆಯಿಂದ ಸರಬರಾಜು ಸರಪಳಿ ವ್ಯತ್ಯಯ, ದರ ಏರಿಕೆ ಹಾಗೂ ಭಾರತದ ಹೆಚ್ಚುತ್ತಿರುವ ಇಂಧನ ಆಮದು ಬೆಲೆ ಬಗ್ಗೆ ಆತಂಕಗಳು ಮೂಡಿವೆ.

ಭಾರತ ತನ್ನ ತೈಲ ಅಗತ್ಯಗಳ ಬಹುಪಾಲನ್ನು ಆಮದು ಮಾಡಿಕೊಳ್ಳುವುದರಿಂದ, ಕಚ್ಚಾ ತೈಲದ ಬೆಲೆ ಏರಿಕೆ ದೇಶಕ್ಕೆ ದೊಡ್ಡ ಚಿಂತೆಯ ವಿಷಯವಾಗಿದೆ. ತೈಲದ ಬೆಲೆ ಏರಿಕೆಯಿಂದ ಸಾರಿಗೆ ಮತ್ತು ಉತ್ಪಾದನಾ ವೆಚ್ಚಗಳು ಹೆಚ್ಚುತ್ತವೆ, ರೂಪಾಯಿ ಮೇಲೆ ಒತ್ತಡ ಉಂಟಾಗುತ್ತದೆ ಹಾಗೂ ದರ ಏರಿಕೆಗೆ ಕಾರಣವಾಗುತ್ತದೆ.

**ಸದ್ಯಕ್ಕೆ ವೆಚ್ಚ ಹೊರುತ್ತಿರುವ ಸರ್ಕಾರ ಮತ್ತು ತೈಲ ಕಂಪನಿಗಳು**

ಪ್ರಸ್ತುತ ಸರ್ಕಾರ ಮತ್ತು ಸರ್ಕಾರಿ ಸ್ವಾಮ್ಯದ ತೈಲ ಕಂಪನಿಗಳು ಕಚ್ಚಾ ತೈಲದ ಬೆಲೆ ಏರಿಕೆಯ ಬಹುಪಾಲು ವೆಚ್ಚವನ್ನು ತಾವೇ ಭರಿಸುತ್ತಿವೆ. ಇಂಧನ ಮೇಲಿನ ಅಬಕಾರಿ ಸುಂಕವನ್ನು ಈಗಾಗಲೇ ಕಡಿತಗೊಳಿಸಲಾಗಿದ್ದು, ತೈಲ ಮಾರುಕಟ್ಟೆ ಕಂಪನಿಗಳು ನಷ್ಟಗಳು ಹೆಚ್ಚುತ್ತಿದ್ದರೂ ಪೆಟ್ರೋಲ್ ಮತ್ತು ಡೀಸೆಲ್‌ನ್ನು ಮಾರುಕಟ್ಟೆ ದರಕ್ಕಿಂತ ಕಡಿಮೆ ಬೆಲೆಗೆ ಮಾರಾಟ ಮಾಡುತ್ತಿವೆ. ಆದರೆ ಕೆಲವು ಇಂಧನ ಉತ್ಪನ್ನಗಳ ಬೆಲೆಗಳು ಈಗಾಗಲೇ ಏರಿಕೆಯಾಗಿದೆ. ಸರ್ಕಾರಿ ಇಂಧನ ಮಾರಾಟಗಾರರು ಈ ಕೆಳಗಿನ ಉತ್ಪನ್ನಗಳ ಬೆಲೆಗಳನ್ನು ಹೆಚ್ಚಿಸಿದ್ದಾರೆ.

**ಆರ್ಥಿಕ ತಜ್ಞರು ಏನಂತಾರೆ**

- ದೀರ್ಘಕಾಲ ತೈಲದ ಬೆಲೆಗಳು ಹೆಚ್ಚಾಗಿದ್ದರೆ ದರ ಏರಿಕೆ ಮತ್ತಷ್ಟು ಹೆಚ್ಚಾಗಬಹುದು
- ಆರ್ಥಿಕ ಬೆಳವಣಿಗೆ ನಿಧಾನಗೊಳ್ಳಬಹುದು
- ರೂಪಾಯಿ ಮೌಲ್ಯ ದುರ್ಬಲವಾಗಬಹುದು
- ಪ್ರಚಲಿತ ಖಾತೆ ಕೊರತೆ ಹೆಚ್ಚಾಗಬಹುದು ಎಂದು ಆತಂಕ ವ್ಯಕ್ತಪಡಿಸುತ್ತಿದ್ದಾರೆ.

ಆರ್‌ಬಿಐ ಪ್ರಸ್ತುತ ಹಣಕಾಸು ವರ್ಷಕ್ಕೆ 6.9 ಶೇಕಡಾ ಆರ್ಥಿಕ ಬೆಳವಣಿಗೆ ಮತ್ತು ಸರಾಸರಿ 4.6 ಶೇಕಡಾ ದರ ಏರಿಕೆಯನ್ನು ಅಂದಾಜಿಸಿದೆ.

ಕೇಂದ್ರ ಬ್ಯಾಂಕ್ ಏಪ್ರಿಲ್‌ನಲ್ಲಿ ರೆಪೊ ದರವನ್ನು 5.25 ಶೇಕಡಾದಲ್ಲಿಯೇ ಸ್ಥಿರವಾಗಿರಿಸಿತು. ಸಂಜಯ್ ಮಲ್ಹೋತ್ರಾ ಅವರ ಪ್ರಕಾರ, ಆರ್‌ಬಿಐ ಈಗ ಹೆಚ್ಚು ಮಾಹಿತಿ ಆಧಾರಿತ ನಿಲುವು ಅನುಸರಿಸುತ್ತಿದ್ದು, ದರ ಏರಿಕೆಯ ಒತ್ತಡಗಳು ದೀರ್ಘಕಾಲ ಉಳಿದರೆ ಕ್ರಮ ಕೈಗೊಳ್ಳಲು ಸಿದ್ಧವಾಗಿದೆ.

# ಒನ್‌ಲೈನ್ ನ್ಯೂಸ್

ಈ ಪುಟದಲ್ಲಿನ ಸುದ್ದಿಗಳನ್ನು ಓದಿದ್ದೀರಾ...?
**ಕುತೂಹಲಕಾರಿಯಾದ ಸುದ್ದಿಗಳು** ನಿಮ್ಮ ಕಣ್ಣು ತಪ್ಪಿದ್ದರೆ, ಇಲ್ಲಿವೆ ಓದಿ.

- ಬ್ಯಾಡ್ಮಿಂಟನ್ ಆಟಗಾರ್ತಿ ಜ್ವಾಲಾ ಗುಟ್ಟಾ ಅವರು ತಮ್ಮ ಹೆರಿಗೆಯಾದ ಮೊದಲ ವರ್ಷದಲ್ಲಿ ಚೆನ್ನೈ ಮತ್ತು ಹೈದರಾಬಾದಿನ ಸರ್ಕಾರಿ ಆಸ್ಪತ್ರೆಗಳಿಗೆ ಸುಮಾರು 60 ಲೀಟರ್ ಎದೆಹಾಲನ್ನು ದಾನ ಮಾಡಿದ್ದಾರೆ. ಅನೇಕ ಶಿಶುಗಳಿಗೆ ತಮ್ಮ ತಾಯಿಯ ಹಾಲನ್ನು ಪಡೆಯಲು ಸಾಧ್ಯವಾಗಿರುವುದಿಲ್ಲ. ಅಂತಹ ಶಿಶುಗಳಿಗೆ 100 ಮಿಲಿ ಹಾಲು ಪುಟ್ಟ ಮಗುವಿಗೆ ಹಲವು ದಿನಗಳವರೆಗೆ ಆಹಾರವನ್ನು ನೀಡಬಲ್ಲದು. ದಾನಿಗಳ ಹಾಲು ಶಿಶುಗಳಿಗೆ ರೋಗನಿರೋಧಕ ಶಕ್ತಿ ಮತ್ತು ಪೋಷಣೆಯನ್ನು ಒದಗಿಸುತ್ತದೆ ಎಂದಿದ್ದಾರೆ.
- ವಿಜಯಪುರದ 14 ವರ್ಷದ ಬಾಲಕಿ ಮಾನ್ಯತಾ ಝೂ ತನ್ನ ಕಲ್ಪನೆಗಳಿಗೆ ಅಕ್ಷರ ರೂಪ ನೀಡಿ, 'The Mystery of the Lost Bag' ಎಂಬ ತನ್ನ ಮೊದಲ ಕಾದಂಬರಿಯನ್ನು ಪ್ರಕಟಿಸಿ ಎಲ್ಲರ ಗಮನ ಸೆಳೆದಿದ್ದಾಳೆ. ವಿಶೇಷವೆಂದರೆ ಕಥೆ ಬರೆಯುವುದರಿಂದ ಹಿಡಿದು, ಆನ್‌ಲೈನ್‌ನಲ್ಲಿ ಪ್ರಕಾಶಕರನ್ನು ಹುಡುಕಿ, ಪುಸ್ತಕವನ್ನು ಪ್ರಕಟಿಸುವ ಹಾಗೂ ಅಮೆಜಾನ್–ಫ್ಲಿಪ್‌ಕಾರ್ಟ್ ಮೂಲಕ ಓದುಗರಿಗೆ ತಲುಪಿಸುವುದರವರೆಗೂ ಎಲ್ಲವನ್ನೂ ಆಕೆ ಸ್ವತಃ ನಿರ್ವಹಿಸಿದ್ದಾಳೆ.
- ಮಂಡ್ಯದ ಶಾಲೆಯೊಂದರಿಂದ ಬಾಲಕ ಕಿಶೋರ್ ಓದಲು ಇಷ್ಟ ಇಲ್ಲದ ಕಾರಣ ಶಾಲೆ ಕಾಂಪೌಂಡ್ ಹಾರಿ ಬೆಂಗಳೂರು ಸೇರಿ ನಾಪತ್ತೆಯಾಗಿದ್ದ. ಬೇರೆ ಬೇರೆ ಹೋಟೆಲ್‌ಗಳಲ್ಲಿ ಕೆಲಸ ಮಾಡಿ ನಾಲ್ಕು ವರ್ಷ ಕಾಲ ಕಳೆದಿದ್ದ. ಕಬಡ್ಡಿ ಮೇಲೆ ವಿಶೇಷ ಆಸಕ್ತಿ ಹೊಂದಿದ್ದ ಕಿಶೋರ್ ಆಟವಾಡುತ್ತಿದ್ದ ವೇಳೆ ಸಿಕ್ಕಿದ್ದಾನೆ.
- ಬೆಂಗಳೂರು ಮೂಲದ ದಂಪತಿ ಡ್ಯಾನಿಶ್ ಅಬ್ಬಿ ಮತ್ತು ವೃಶಾಲಿ ಪ್ರಸಾದ ಅವರುಗಳು ಶ್ರೀಲಂಕಾದ ತಲೈಮನ್ನಾರ್‌ನಿಂದ ಬೆಳಗ್ಗೆ 4:30ರ ಈಜಲಾರಂಭಿಸಿ 32 ಕಿ.ಮಿ. ದೂರದ ತಮಿಳುನಾಡಿನ ಧನುಷ್ಕೋಟಿಯನ್ನು ಮಧ್ಯಾಹ್ನ 3:15ಕ್ಕೆ ತಲುಪುವ ಮೂಲಕ ದಾಖಲೆ ಸಾಧಿಸಿದರು.
- ಉತ್ತರ ಕನ್ನಡ ಜಿಲ್ಲೆಯ ಜೋಯಿಡಾ ತಾಲೂಕಿನ ದಟ್ಟ ಕಾಳಿ ಹುಲಿ ಮೀಸಲು ಸಂರಕ್ಷಿತ ಅರಣ್ಯದೊಳಗೆ ತಲೆಮಾರುಗಳಿಂದ ವಾಸಿಸುತ್ತಿರುವ ಬುಡಕಟ್ಟು ಜನರಿಗೆ ಸುಸ್ಥಿರ ಜೀವನೋಪಾಯವನ್ನು ಒದಗಿಸುವ ನಿಟ್ಟಿನಲ್ಲಿ ಬ್ರ್ಯಾಂಡೆಡ್ 'ಅಡವಿ ಝೇಂಕಾರ' ಜೇನುತುಪ್ಪವನ್ನು ಇತ್ತೀಚೆಗೆ ಮಾರುಕಟ್ಟೆಗೆ ಬಿಡುಗಡೆ ಮಾಡುವ ಮೂಲಕ ಅರಣ್ಯ ನಿವಾಸಿಗಳಿಗೆ ಆದಾಯದ ಅವಕಾಶವನ್ನು ಕಲ್ಪಿಸಲಾಗಿದೆ.

## ಓದುಗರ ಅನಿಸಿಕೆ...




**ಮುಖ್ಯಮಂತ್ರಿಗಳು ಆಸಕ್ತಿವಹಿಸಬೇಕು :** ಊರಿಗೊಂದು ಶಾಲೆ, ಪಂಚಾಯಿತಿ ಮತ್ತು ಸಹಕಾರ ಸಂಘ ಇರಲೇಬೇಕು. ಆಗ ಮಾತ್ರ ಗ್ರಾಮಗಳ ಸರ್ವತೋಮುಖ ಪ್ರಗತಿ ಸಾಧ್ಯ ಎಂದು ಪ್ರಧಾನಿಯಾಗಿದ್ದ ನೆಹರೂ ಹೇಳಿದ್ದರು. ಇಂದು ಹಾಲಿನ ಸಹಕಾರ ಸಂಘಗಳು ಊರುಗಳ ಆರ್ಥಿಕ ಚೇತರಿಕೆಗೆ ಕಾರಣವಾಗಿವೆ. ನಮ್ಮ ಉತ್ತರ ಕರ್ನಾಟಕದ ಪ್ರತಿ ಊರಿನಲ್ಲೂ ಹಾಲಿನ ಸಹಕಾರ ಸಂಘಗಳನ್ನು ಆರಂಭಿಸಲು ಮುಖ್ಯಮಂತ್ರಿಗಳು ಆಸಕ್ತಿವಹಿಸಬೇಕು.

**ಶಾಂತಾಭಾಯಿ ದುರುಗಪ್ಪನವರ್, ಜಮಖಂಡಿ**

**ಶ್ಲಾಘನೀಯವಾಗಿವೆ :** ವರ್ಷಗಳ ಹಿಂದೆ ರಾಜ್ಯದಲ್ಲಿ ಸಹಕಾರ ಬ್ಯಾಂಕಗಳನ್ನು ಸ್ಥಾಪಿಸಿದ ಮಹನೀಯರುಗಳ ಆಶೋತ್ತರಗಳಿಗನುಗುಣವಾಗಿ ಸರ್ವತೋಮುಖ ಅಭಿವೃದ್ಧಿಯತ್ತ ಮುನ್ನಡೆಯುತ್ತಿರುವ ನಮ್ಮ ಸಹಕಾರ ಬ್ಯಾಂಕುಗಳು ಶ್ಲಾಘನೀಯವಾಗಿವೆ. ಇದಕ್ಕೆ ಸದಸ್ಯರು ಮತ್ತು ಠೇವಣಿದಾರರ ಪ್ರೋತ್ಸಾಹ ಹಾಗೂ ಸಹಕಾರ, ಸಿಬ್ಬಂದಿ ವರ್ಗದವರ ಪರಿಶ್ರಮ, ಆಡಳಿತ ಮಂಡಳಿಯ ಇಚ್ಛಾಶಕ್ತಿಯೇ ಇದಕ್ಕೆ ಕಾರಣವಾಗಿದೆ.

**ಎಲ್. ರಮೇಶ್ ರಾವ್, ಬೆಂಗಳೂರು**

ಸಂಪಾದಕರು :
**ಪುಂಡಲೀಕ ಎನ್. ಕೇರೂರೆ,**
ಮುಖ್ಯಕಾರ್ಯನಿರ್ವಹಣಾಧಿಕಾರಿ,
ಕರ್ನಾಟಕ ರಾಜ್ಯ ಪಟ್ಟಣ ಸಹಕಾರ ಬ್ಯಾಂಕುಗಳ
ಮಹಾಮಂಡಳ ನಿ., ಬೆಂಗಳೂರು.

**ಇವರಿಗೆ,**

Edited, Published and printed by Pundalik N. Kerure, C.E.O. on behalf of the
Karnataka State Co-operative Urban Banks Federation Ltd., Bangalore - 560027.
Published at : # 132, K.H. Road, Bangalore - 560027.
Printed at : Navarathna Printers, #35, 3rd Cross, Sudhamanagar, Bangalore - 560027.